# ನೇಸರು

₹ 5/-

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXIV - 9 September 2016

PAGES 16



ಅಸೋಸಿಯೇಶನ್‌ನಲ್ಲಿ ಶ್ರೀ ಸ್ವರ್ಣಗೌರಿ ಮತ್ತು ಶ್ರೀ ಮಹಾಗಣಪತಿ ಉತ್ಸವ

**The Mysore Association, Bombay**

393, Bhau Daji Road, Matunga, Mumbai - 400 019.

Tel.: 2402 4647, 2403 7065 • Fax : 2401 0574

Email : mysoreassociation.mumbai@gmail.com

# ವಿದೂಷಿ ರಮಾಮಣಿ ಅವರಿಂದ ಸಂಗೀತ ಕಛೇರಿ




ಮೈಸೂರು ಅಸೋಸಿಯೇಷನ್ ಮುಂಬೈ ಮತ್ತು ಶ್ರೀರಂಜನಿ ಸಂಗೀತ ಸಭಾ ಡೊಂಬಿವಲಿ ಆಯೋಜನೆಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವದ ಅಂಗವಾಗಿ ಆಗಸ್ಟ್ 20 ರಂದು ಸಂಜೆ 6.30 ರಿಂದ ಮೈಸೂರು ಅಸೋಸಿಯೇಷನ್ನಿನ ಎರಡನೇ ಮಹಡಿಯ ಸಭಾಗೃಹದಲ್ಲಿ ಬೆಂಗಳೂರಿನ ಗಾನಕಲಾ ಭೂಷಣ, ವಿದೂಷಿ ಆರ್.ಎ.ರಮಾಮಣಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಕಛೇರಿಯನ್ನು ಆಯೋಜಿಸಲಾಗಿತ್ತು.

ಆರ್.ಎ.ರಮಾಮಣಿಯವರು ಅಭೋಗ್, ವರ್ಣ, ಚಕ್ರವಾಕ, ನಾಟ, ಜಯಂತಶ್ರೀ ರೀತಿಗೌಳ, ಕಲ್ಯಾಣಿ, ಮಧುವಂತಿ ರಾಗಗಳಲ್ಲಿ ಶ್ರೀ ತ್ಯಾಗರಾಜರು ಮತ್ತು ಸ್ವಾಮಿ ದೀಕ್ಷಿತರು, ವಿಜಯದಾಸರು, ಪುರಂದರದಾಸರ ಮತ್ತು ಬಳ್ಳಾರಿ ಎಂ.ಶೇಷಗಿರಿ ಆಚಾರ್ ಅವರ ಕೃತಿಗಳನ್ನು ಮತ್ತು ದೇವರ ನಾಮಗಳನ್ನು ಹಾಡಿದರು. ಪಕ್ಕವಾದ್ಯದಲ್ಲಿ ಪಿಟೀಲಿನಲ್ಲಿ ವಿದ್ವಾನ್ ಎಸ್.ವಿ.ರಾಮಚಂದ್ರನ್, ಮೃದಂಗದಲ್ಲಿ ರಾಜೇಶ್ ಶ್ರೀನಿವಾಸನ್ ಸಹಕರಿಸಿದರು. ಅಸೋಸಿಯೇಷನ್ನಿನ ಮಂಜುನಾಥಯ್ಯ ಮಾತನಾಡಿ, ಪ್ರಸಿದ್ಧ ಸಂಗೀತ ಕಲಾವಿದರು ಅಸೋಸಿಯೇಷನ್ನಿಗೆ ಬಂದು ತಮ್ಮ ಸಂಗೀತ ಕಾರ್ಯಕ್ರಮ ನೀಡುತ್ತಿರುವುದು ಅಭಿನಂದನೀಯ. ಮೈಸೂರು ಅಸೋಸಿಯೇಷನ್ನಿನೊಂದಿಗೆ ಶ್ರೀರಂಜನಿ ಸಂಗೀತ ಸಭಾದವರು ಇಂತಹ ಅರ್ಥಪೂರ್ಣ ಕಾರ್ಯಕ್ರಮವನ್ನು ಆಯೋಜಿಸಿರುವುದು ಹೆಮ್ಮೆಯ ವಿಷಯ. ಭವಿಷ್ಯದಲ್ಲೂ ಇಂತಹ ಕಾರ್ಯಕ್ರಮಗಳಿಗೆ ಅಸೋಸಿಯೇಷನ್ನಿನ ಸಹಕಾರ, ಪ್ರೋತ್ಸಾಹ ಸದಾ ಇದೆ ಎಂದರು.

ಸಂಗೀತ ಸಭಾದ ಸ್ಥಾಪಕ ವಿದ್ವಾನ್ ಟಿ.ಎನ್.ಅಶೋಕ್ ಅವರು, ವಿದೂಷಿ ಆರ್.ಎ.ರಮಾವಣಿ ಅವರನ್ನು ಸಭೆಗೆ ಪರಿಚಯಿಸಿ ಕೃತಜ್ಞತೆ ಸಲ್ಲಿಸಿದರು. ಮೃದಂಗ ವಿದ್ವಾನ್ ಟಿ.ಎನ್.ಎಸ್.ಮಣಿ ಉಪಸ್ಥಿತರಿದ್ದರು. ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷ ಕಮಲಾ ಅತಿಥಿಗಳನ್ನು ಶಾಲು ಹೊದೆಸಿ, ಫಲಪುಷ್ಪವನ್ನಿತ್ತು ಗೌರವಿಸಿದರು. ಶ್ಯಾಮಲಾ ರಾಧೇಶ್ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಮಹಾಮಂಗಳಾರತಿ, ಪ್ರಸಾದ ವಿತರಣೆ ಜರುಗಿತು.



**ಸೋಮವಾರ, ಆಗಸ್ಟ್ 15 ರಂದು ಅಸೋಸಿಯೇಷನ್ನಿನಲ್ಲಿ ಧ್ವಜಾರೋಹಣ ಅಧ್ಯಕ್ಷೆ ಕಮಲ ಮತ್ತು ಸಮಿತಿಯ ಸದಸ್ಯರ ಹಾಜರಿಯಲ್ಲಿ**

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

*ಸಂಪಾದಕೀಯ*

# ನೇಸರು
## ತಿಂಗಳೋಲೆ

**ಸಂಪುಟ 34** **ಸೆಪ್ಟೆಂಬರ್ 2016** **ಸಂಚಿಕೆ 9**

ದೇಶವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ನಮಗೆ ವಿದ್ಯಾರ್ಥಿ ಸಮೂಹದ ಅವಶ್ಯಕತೆ ಇದೆ. ಇಂದಿನ ಈ ಯುವಪೀಳಿಗೆಯು ಶೈಕ್ಷಣಿಕವಾಗಿ ಮತ್ತು ತಾಂತ್ರಿಕವಾಗಿ ಅಭಿವೃದ್ಧಿ ಹೊಂದಿದ್ದು, ಮುಂದಿನ ದೇಶದ ಭವಿಷ್ಯವನ್ನು ಕಟ್ಟಲು ಈ ಯುವಪೀಳಿಗೆಯ ಪಾತ್ರ ಅತ್ಯಂತ ಮಹತ್ತರವಾದುದು. ಇಂತಹ ಯುವಪೀಳಿಗೆಯನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ತರವಾದುದು.

ಪ್ರಸ್ತುತ ಸಮಾಜದಲ್ಲಿ ಶಿಕ್ಷಕರ ಮಹತ್ವದ ಬಗ್ಗೆ ಸ್ವಲ್ಪ ದೃಷ್ಟಿ ಹಾಯಿಸೋಣ. ಪ್ರತಿಯೊಬ್ಬ ವಿದ್ಯಾರ್ಥಿಯ ಯಶಸ್ಸಿನ ಹಿಂದೆ ಒಬ್ಬ ಯಶಸ್ವಿ ಶಿಕ್ಷಕನ ಪ್ರರಿಶ್ರಮವೂ ಅಡಗಿದೆ ಎನ್ನುವುದನ್ನು ಮರೆಯುವಂತಿಲ್ಲ. ಶಿಕ್ಷಕ ಎಂದೂ ನಿವೃತ್ತಿಯಾಗುವುದಿಲ್ಲ. ಗುರುವಿಗೆ ತಾನು ಗೆದ್ದ ಅನುಭವ ದೊರಕುವುದು ಯಾವಾಗ ಎಂದರೆ ತನ್ನ ಶಿಷ್ಯ ತನ್ನನ್ನೆ ಮೀರಿಸಿದಾಗ. ಗುರು ಎಂದರೆ ಕೇವಲ ನಾಲ್ಕು ಗೋಡೆಗಳ ಮಧ್ಯೆ ಕಲಿಸಿದಾತ ಮಾತ್ರ ಅಲ್ಲ. ಒಂದಕ್ಷರವನ್ನು ಕಲಿಸಿದವನು ಗುರು ಆಗುತ್ತಾನೆ. ಒಳ್ಳೆಯ ಸ್ನೇಹಿತ ಕೂಡ ಗುರು ಆಗುತ್ತಾನೆ. ಗುರು ಅಂದಾಗ ಅಲ್ಲಿ ವಯಸ್ಸಿನ ಮಿತಿ ಬರುವುದಿಲ್ಲ. ಅಲ್ಲಿ ಲಿಂಗ, ಜಾತಿ ಭೇದವಿಲ್ಲ. ಗಾಂಧೀಜಿಯವರಿಗೆ ರಾಜಕೀಯ ಗುರು ಗೋಪಾಲಕೃಷ್ಣ ಗೋಖಲೆಯವರಾಗಿದ್ದರಂತೆ, ನಮ್ಮ ಇಂದಿನ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ 'ವಸಂತ ಪರಿಕ್ಕಾರ್' ರಾಜಕೀಯ ಗುರು ಅಂತೆ.

'ಅರಿವೇ' ಗುರುವು ಎನ್ನುತ್ತಾರೆ. ಗುರುವೇ ದೇವರು ಎನ್ನುವ ಆಧ್ಯಾತ್ಮಿಕ ಭಾವ. ಗುರುವಿನ ಗುಲಾಮನಾಗುವವರೆಗೂ ದೊರಕದಣ್ಣ ಮುಕುತಿ ಅಂತ ಹೇಳುತ್ತಾರೆ. ಅಂದರೆ ಗುರುವಿನ ಮಹತ್ವ ಅಷ್ಟು ಮಹತ್ತರವಾದುದು. ನಮ್ಮ ಕುವೆಂಪು ಅವರು ಒಂದೆಡೆ ಹೀಗೆ ಹೇಳುತ್ತಾರೆ.

*"ಅಂದು ಮುಂದೆ ಗುರಿ ಇತ್ತು, ಹಿಂದೆ ಗುರು ಇದ್ದ, ಸಾಗುತಿತ್ತು ರಣಧೀರರ ದಂಡು*
*ಇಂದು ಮುಂದೆ ಗುರಿ ಇಲ್ಲ, ಹಿಂದೆ ಗುರು ಇಲ್ಲ, ಸಾಗುತ್ತಿದೆ ರಣಹೇಡಿಗಳ ಹಿಂಡು"*

ನಮ್ಮ ಉಪನಿಷತ್ತು, ಪುರಾಣಗಳು, ವೇದ, ಶಾಸ್ತ್ರಗಳೆಲ್ಲದರಲ್ಲೂ ಗುರುವಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ – ಅರ್ಜುನರ ಸಂಬಂಧ ಮತ್ತು ರಾಮಾಯಣದಲ್ಲಿ ಶ್ರೀರಾಮ – ಹನುಮರ ಸಂಬಂಧಗಳು ಗುರು–ಶಿಷ್ಯರ ಸಂಬಂಧಕ್ಕೆ ಅತಿ ಸೂಕ್ತವಾದ ನಿದರ್ಶನಗಳು. ಗುರು ಪರಂಪರೆ ಹಾಗೂ ಗುರು ಶಿಷ್ಯರ ಅತ್ಯಂತ ನಿಕಟ ಸಂಬಂಧವು ಮುಂದುವರಿದು ನಮ್ಮ ದಾಸ ಸಾಹಿತ್ಯದಲ್ಲೂ ಗಾಢವಾಗಿ ಕಾಣಬಹುದಾಗಿದೆ. ಸಂತಶ್ರೇಷ್ಠ ಕಬೀರದಾಸರು 'ದೇವರಿಗಿಂತ ಗುರುವೇ ಶ್ರೇಷ್ಠ ಏಕೆಂದರೆ ದೇವರ ಮಹಿಮೆಯನ್ನು ಪರಿಚಯ ಮಾಡಿಸಿದವನೇ ಗುರು' ಎಂದು ಹೇಳಿದ್ದು ಅರ್ಥವತ್ತಾಗಿದೆ.

"ಯಾವ ಗುರು ಶಿಷ್ಯನಿಗೆ ಶುದ್ಧ ಮನಸ್ಸು ಸದೃಢ ಆರೋಗ್ಯ ಸುಜ್ಞಾನದ ಉಪಯುಕ್ತತೆ ಪಾರದರ್ಶಕ ಜೀವನ ಪದ್ಧತಿ ಎಂಬ ವಿದ್ಯೆ ಕಲಿಸುತ್ತ ದುಷ್ಪರಿಣಾಮ ವಿದ್ಯೆ ನಾಶ ಮಾಡುವನೋ ಅವನೇ ನಿಜವಾದ ಗುರು ಎಂದು ಬರ್ನಾಡ ಶಾ ಹೇಳಿದ.

ನಮ್ಮ ಹಿಂದೂ ಪರಂಪರೆಯಲ್ಲಿ ಅನಾದಿ ಕಾಲದದಿಂದಲೂ ಗುರುವಿನ ಮಹತ್ವವನ್ನು ಸಾರುತ್ತಾ ಬಂದಿದ್ದಾರೆ. ಸ್ಕಂದ ಪುರಾಣದಲ್ಲಿ ಗುರುವನ್ನು ನಂದಾದೀಪಕ್ಕೆ ಹೋಲಿಸಲಾಗಿದೆ.

*ಅಖಂಡ ಮಂಡಲಾಕಾರಂ ವ್ಯಾಪ್ತಂ ಯೇನಾ ಚರಾಚರಂ ।*
*ತತ್ಪದಂ ದರ್ಶಿತಂ ಯೇನಾ ತಸ್ಮೈ ಶ್ರೀಗುರುವೇ ನಮಃ ।*

ಎಂದು ಗುರುಹಿರಿಮೆಯನ್ನು ಕೊಂಡಾಡಲಾಗಿದೆ. ಗುರುವಿಗಿಂತ ಮೀರಿದ ತತ್ವ, ತಪಸ್ಸು ಬೇರೆ ಇಲ್ಲ ಎಂದು ಇದರಿಂದ ತಿಳಿದು ಬರುತ್ತದೆ. ಸರ್ವಜ್ಞ ಯಾರು ನಿಜವಾದ ಗುರುವೆನ್ನುವುದನ್ನು ಹೀಗೆ ಹೇಳುತ್ತಾನೆ.

"ಹೇಳಿದ್ದನ್ನೇ ಹೇಳುವವನು, ಕೇಳಿದ್ದನ್ನೇ ಕೇಳುವವನು, ಹೇಳಿದ್ದನ್ನೇ ಕೇಳಿ ಸುಖಿಸುವವನು, ಗುರು ಬೇರೆ ಇಲ್ಲ ಸರ್ವಜ್ಞ"

ಹೂವಿನೊಂದಿಗೆ ದಾರವೂ ದೇವರ ಮುಡಿ ಸೇರುವಂತೆ, ಶಿಷ್ಯನ ಯಶಸ್ಸು, ಅದು ಗುರುವಿನ ಯಶಸ್ಸು ಆಗಿರುತ್ತದೆ. ಅದು ಅಷ್ಟೇ ಖುಷಿಯನ್ನು, ಸಂತಸವನ್ನು ಗುರುವಿಗೆ ನೀಡುತ್ತದೆ. ಇಂತಹ ನಿಸ್ವಾರ್ಥ ಮನೋಭಾವದ ಗುರುಗಳಿಗೆ ಇದೋ ನಮ್ಮ ಹೃದಯಾಂತರಾಳದ ನಮನಗಳು.

**ಡಾ. ಜ್ಯೋತಿ ಸತೀಶ್**

# ರಾಘವೇಂದ್ರ ಉಡುಪಿ ಅವರ ಹಾಸ್ಯ ಲೇಖನಗಳ ಸಂಕಲನ 'ಕಾವೇರಮ್ಮನ ಸಂಗೀತ ಕಛೇರಿ'

'ಕಾವೇರಮ್ಮನ ಸಂಗೀತ ಕಛೇರಿ' ರಾಘವೇಂದ್ರ ಉಡುಪಿ ಅವರ ಹಾಸ್ಯ ಲೇಖನಗಳ ಸಂಕಲನ. ಇಲ್ಲಿ ಬರುವ ಲೇಖನಗಳಲ್ಲಿ ಲೇಖಕರು ಸಣ್ಣ ಸಣ್ಣ ಎಳೆಗಳನ್ನು ತೆಗೆದುಕೊಂಡು ಆಸಕ್ತಿಯಿಂದ ಓದಿಸಿಕೊಂಡು ಹೋಗುವಂತಹ ಲೇಖನಗಳನ್ನು ಬರೆದು ನಮ್ಮ ಮುಂದಿರಿಸಿದ್ದಾರೆ. ಇಲ್ಲಿ ಬರುವ ಲೇಖನಗಳನ್ನು ನಾವು ಪ್ರಬಂಧವೆಂದೂ, ಹಾಸ್ಯ ಲೇಖನವೆಂದೂ ಅಥವಾ ಹರಟೆಯೆಂದೂ ಕರೆಯಬಹುದಾಗಿದೆ. ಇವುಗಳ ಮುಖ್ಯ ಲಕ್ಷಣವೆಂದರೆ ಇವು ಬೇಗನೆ ಓದಿ ಮುಗಿಯುವಂತಿರಬೇಕು. ನವಿರಾದ ಹಾಸ್ಯ ಇದರಲ್ಲಿ ತುಂಬಿಕೊಂಡಿದ್ದು, ಶೈಲಿ ಸರಳವೂ ಹೃದಯಂಗಮವಾಗಿ ಇರಬೇಕು. ನಿರೂಪಣೆ ಆತ್ಮೀಯತೆಯಿಂದ ಕೂಡಿರಬೇಕು. ಮುಕ್ತಾಯಗೊಳ್ಳುವಾಗ ಏನಾದರೂ ಸಂದೇಶವಿರಬೇಕು. ಈ ಲೇಖನಗಳು ಚಿಕ್ಕದ್ದಾಗಿದ್ದರೂ ಚೊಕ್ಕವಾಗಿದ್ದು ಓದುಗರ ಜ್ಞಾನವನ್ನು ಹೆಚ್ಚಿಸಲು ಸಹಾಯ ಮಾಡುವಂತಿರಬೇಕು. ಈ ಓದುಗರ ಮನಸ್ಸನ್ನು ಪ್ರಫುಲ್ಲಿತಗೊಳಿಸಿ ಅವರಿಗೆ ಹಿತ ನೀಡುವಂತಿರಬೇಕು.

ಇಲ್ಲಿ ಬರುವ ಪ್ರಬಂಧಗಳು ಹರಟೆರೂಪದ ಬರಹಗಳು. ಓದಿಸಿಕೊಂಡು ಹೋಗುವ ಸ್ವಭಾವ ಈ ಬರಹಗಳಲ್ಲಿವೆ. ಇಲ್ಲಿ ಲೇಖಕರು ತೆಗೆದುಕೊಂಡಿರುವ ವೈವಿಧ್ಯಮಯ ವಿಷಯಗಳು ಅವರ ಆಳವಾದ ಓದು, ಅನುಭವ ಚಿಂತನೆಗಳಿಗೆ ಸಾಕ್ಷಿ ನುಡಿಯುತ್ತವೆ.

ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಶೃಂಗಾರ ರಸದ ಬಳಿಕ ಹಾಸ್ಯಕ್ಕೆ ಹೆಚ್ಚಿನ ಸ್ಥಾನವನ್ನು ನೀಡಲಾಗಿದೆ. ಈ ಸಂಕಲನದ ಹೆಚ್ಚಿನ ಲೇಖನಗಳು ಹಾಸ್ಯದ ಕಡೆಗೆ ಹೆಚ್ಚಿನ ಒತ್ತನ್ನು ಕೊಡುತ್ತವೆ. ಹಾಗೆಂದು ಇವು ಬರಿಯ ಹಾಸ್ಯ ಲೇಖನಗಳೆಂದು ಹೇಳಲಾಗದು. ಇಲ್ಲಿ ಹಾಸ್ಯ ಮತ್ತು ಗಂಭೀರ ಚಿಂತನೆಗಳು ಸಮಭಾವದಿಂದ ಮೇಳೈಸಿಕೊಂಡಿರುವುದನ್ನು ನಾವು ಕಾಣಬಹುದಾಗಿದೆ. ನಾವು ದಿನನಿತ್ಯದ ಬದುಕಿನಲ್ಲಿ ಉಪಯೋಗಿಸುವ ಅನೇಕ ಪದಗಳು ಇಲ್ಲಿ ಲೇಖಕರನ್ನು ಕಾಡಿಸಿ ಬರಹರೂಪವನ್ನು ಪಡೆದುಕೊಂಡಿವೆ.

'ಕಾವೇರಮ್ಮನ ಸಂಗೀತ ಕಛೇರಿ' ಕೃತಿಯ ಮೊದಲು ಲೇಖನ ಕಾರ್ಯಕ್ರಮ ಆಯೋಜನೆ ಮಾಡುವವರಿಗೆ ಮಾತ್ರ ಇಂತಹ ಅನುಭವ ಇರಬಹುದಾಗಿದೆ. 'ಟಿಕೇಟ್ಸ್ ಟಿಕೇಟ್ಸ್' ಪ್ರಬಂಧದಲ್ಲಿ ಲೇಖಕರು ಬಸ್ಸಿನಲ್ಲಿ ಕಂಡಕ್ಟರ್ ನಿಂದ ಆಗಬಹುದಾದ ಮೋಸದಾಟವನ್ನು ಚಿತ್ರಿಸಿದ್ದಾರೆ. ಬಸ್ಸಿನಲ್ಲಿ ಪ್ರಯಾಣಿಸುವ ಹೆಚ್ಚಿನ ಎಲ್ಲರಿಗೂ ಅನುಭವವಿರುವ ಈ ಪ್ರಸಂಗವನ್ನು ಲೇಖಕರಿಲ್ಲಿ ಚಿತ್ರಿಸಿದ್ದಾರೆ.

"ಮದುವೆ ಮದುವೆ ಮದುವೆ' ಪ್ರಬಂಧದಲ್ಲಿ ಕೃತಿಕಾರರು ಮದುವೆ ನಡೆದು ಬಂದ ದಾರಿಯ ಮೇಲೆ ಬೆಳಕು ಚೆಲ್ಲಿದ್ದಾರೆ.

ಲೇಖಕರ ಮಿತ್ರ ಸಾಹಿತಿ ಶ್ರೀ ಕು. ಗೋ. ಅವರು ಲೇಖಕರ ಮದುವೆಯ ಇಪ್ಪತ್ತೈದನೆಯ ವಾರ್ಷಿಕೋತ್ಸವಕ್ಕೆ ಬಂದು ಇವರ ಬಗ್ಗೆಯೇ ಬರೆದಿರುವ 'ಓಂ ಶ್ರೀ ನಾರಾಯಣಾಯ ನಮಃ' ಲೇಖನವೂ ಈ ಕೃತಿಯಲ್ಲಿ ಮೂಡಿಬಂದಿದೆ.

'ನರ್ಸರಿ ಸ್ಕೂಲ್ ಮತ್ತು ಲೋಕಸಭೆ' ಪ್ರಬಂಧದಲ್ಲಿ ಪ್ರಬಂಧಕಾರರು ನರ್ಸರಿ ಸ್ಕೂಲಿನ ಮಕ್ಕಳಿಗೆ ಮತ್ತು ಲೋಕಸಭೆಯ ಎಂ.ಪಿ.ಗಳಿಗೆ ಇರುವ ಸಾಮ್ಯತೆಯ ಬಗ್ಗೆ ವಿಶ್ಲೇಷಿಸಿದ್ದಾರೆ.

'ಸರ್‌ನೇಮ್' ಪ್ರಬಂಧದಲ್ಲಿ ಕೃತಿಕಾರರು ನೇಮಿಗಿಂತಲೂ ಸರ್‌ನೇಮಿಗೆ ಇರುವ ಪ್ರಾಮುಖ್ಯತೆಯ ಬಗ್ಗೆ ಬರೆದಿದ್ದಾರೆ.

ಇಂದು ಎಲ್ಲ ಸಮಾರಂಭದಲ್ಲಿಯೂ ಸರ್ವ ಸಾಮಾನ್ಯವಾಗಿರುವ ಉಡುಗೊರೆಯ ಆಶೀರ್ವಾದ ಈಗ ಸಮಾರಂಭಗಳಿಗೆ ಆಮಂತ್ರಿಸುವ ಪ್ರತಿಯೊಂದು ಆಮಂತ್ರಣ ಪತ್ರಗಳಲ್ಲೂ ದಪ್ಪ ಅಕ್ಷರಗಳಲ್ಲಿ ಅಚ್ಚಾಗಿರುತ್ತದೆ. ಆದರೂ ಕೆಲವೊಮ್ಮೆ ಉಡುಗೊರೆ ತೆಗೆದುಕೊಳ್ಳಲೇ ಬೇಕಾದ ಪ್ರಸಂಗ ಬರುತ್ತದೆ. ಈ ವಿಷಯದ ಬಗ್ಗೆ ಇಲ್ಲಿ ಜಿಜ್ಞಾಸೆ ನಡೆದಿದೆ.

'ಒಂದ್ನಿಮಿಷ' ಸಂಕಲನದಲ್ಲಿ ಬಂದಿರುವ ಇನ್ನೊಂದು ಸ್ವಾರಸ್ಯಕರ ಪ್ರಬಂಧ. ನಿಜವಾಗಿ ನಿಮಿಷ ಅಂದರೆ ಕಣ್ಮುಚ್ಚಿ ತೆರೆಯುವಷ್ಟು ಹೊತ್ತು ಎಂದು ಅರ್ಥವಾದರೂ ಈ ಒಂದ್ನಿಮಿಷ ನಮ್ಮೆಲ್ಲರ ಬದುಕಿನಲ್ಲಿ ಆವರಿಸಿಸುವುದನ್ನು ಕಾಣುತ್ತೇವೆ.

✍ ಡಾ. ಕರುಣಾಕರ್ ಎನ್. ಶೆಟ್ಟಿ, ಪಣಿಯೂರ್

'ಒಂದ್ನಿಮಿಷ'ದಂತೆ ನಮ್ಮನ್ನು ಆವರಿಸಿಕೊಂಡಿರುವ ಇನ್ನೊಂದು ಶಬ್ದ 'ಐ ಮೀನ್' ಅದೇ ರೀತಿ ಬ್ರಿಟಿಷರು ಇಲ್ಲಿ ಬಿಟ್ಟು ಹೋಗಿರುವ ಥ್ಯಾಂಕ್ಯೂ, ವೆಲ್‌ಕಮ್, ಈಫ್ ಯು ಡೋಂಟ್ ಮೈಂಡ್, ಸ್ಸಾರಿ, ಎಕ್ಸ್‌ಕ್ಯೂಸ್ ಮಿ, ನೋ ಪ್ರಾಬ್ಲಮ್ ಹೀಗೆ ನಮ್ಮ ಬದುಕಿನಲ್ಲಿ ಈ ಶಬ್ದಗಳು ನಮಗೆ ಅರಿವಾಗದಂತೆ ಹಾಸು ಹೊಕ್ಕಾಗಿರುವುದನ್ನು ಲೇಖಕರು ಇಲ್ಲಿ ನಮಗೆ ತಿಳಿಸಿದ್ದಾರೆ.

ಈಗ ಮಾರ್ಕೆಟಿನಲ್ಲಿ ಒಂದು ವಸ್ತು ತೆಗೆದುಕೊಂಡರೆ ಅದರ ಜೊತೆ ಇನ್ನೊಂದು ವಸ್ತು ಉಚಿತ. ಒಂದು ಬಾಟ್ಲಿ ಶ್ಯಾಂಪು ತೆಗೆದುಕೊಂಡರೆ ಒಂದು ಬಾಚಣಿಗೆ ಉಚಿತ. ಹೀಗೆ ಸುಲಭದಲ್ಲಿ ಮಾರಾಟ ಮಾಡಲು ಮಾಡಿಕೊಂಡಿರುವ ಈ ಸುಲಭ ಉಪಾಯವನ್ನು ಲೇಖಕರಿಲ್ಲಿ ವಿವರಿಸಿದ್ದಾರೆ.

'ಮೊಬೈಲ್ ಫೋನು' ಇಲ್ಲಿ ಬರುವ ಇನ್ನೊಂದು ಓದಲೇ ಬೇಕಾದ ಲೇಖನ. ಮೊಬೈಲು ಮಾಡುವ ಪ್ರಯೋಜನ ಮತ್ತು ಅದು ಮಾಡುವ ಅವಾಂತರ ಎಲ್ಲವೂ ಇಲ್ಲಿ ಬಂದಿವೆ.

'ನಾನು ಮತ್ತು ನನ್ನ ಜೀವನ ಸಂಗಾತಿ ಗ್ಲೌಕೋಮ' ಪ್ರಬಂಧದಲ್ಲಿ ಲೇಖಕರು ರೋಗದ ಹೆಸರನ್ನು ಕೆಲವೊಮ್ಮೆ ಕೇಳುಗರು ತಪ್ಪು ತಿಳಿದಾಗ ಆಗುವ ಅನರ್ಥವನ್ನು ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ.

'ಶಾರ್ಟ್ ಫಾರ್ಮ್'ನ್ನು ಉಪಯೋಗ ಮಾಡುವುದರಿಂದ ಆಗುವ ಲಾಭ ಮತ್ತು ನಷ್ಟದ ವಿವರಣೆಯೂ ಇಲ್ಲಿ ಬಂದಿದೆ.

'ಜಾಹಿರಾತು ಪ್ರಪಂಚ' ಪ್ರಪಂಚದಲ್ಲಿ ಜಾಹಿರಾತು ಪ್ರಪಂಚದ ಒಳಹೊರಗನ್ನು ಲೇಖಕರು ಚಿತ್ರಿಸಿದ್ದಾರೆ.

'ಹಳೆ ಸಿನಿಮಾ ಹಾಡು ಹೊಸ ಅಲೆಯ ಬೀಡು' ಪ್ರಬಂಧದಲ್ಲಿ ಸಿನಿಮಾ ಹಾಡುಗಳ ರಸ ಸಂಜೆ ಕಾರ್ಯಕ್ರಮದಲ್ಲಿ ಪ್ರಸಿದ್ಧ ಹಳೆಯ ಹಾಡುಗಾರರಹೆಸರನ್ನು ಹಾಕಿ ಲತಾ ಕೇ ನಾಮ್ ಏಕ್ ಶಾಮ್, ರಫಿ ಕೆ ನಾಮ್ ಏಕ್ ಶಾಮ್ ಹೆಸರಿನಲ್ಲಿ ಮಾಡುವ ಅನರ್ಥಗಳ ಚಿತ್ರಣ ಬರುತ್ತದೆ. ಇಂತಹ ಕಾರ್ಯಕ್ರಮವನ್ನು ವೀಕ್ಷಿಸಿದವರಿಗೆ ಇದರ ಅನುಭವ ಚೆನ್ನಾಗಿಯೇ ಆಗಿರುತ್ತದೆ.

'ಧಾರವಾಹಿ ಪುರಾಣ'ದಲ್ಲಿ ಧಾರವಾಹಿಗಳು ತೋರಿಸುವ ಜಾಹಿರಾತುಗಳ ಬಗ್ಗೆ ವಿವರಣೆಯಿದ್ದರೆ 'ನಾ ಹೆಣ್ಣಾದಾಗ' ಪರಕಾಯ ಪ್ರವೇಶ ಮಾಡಿ ಬರೆದ ಲೇಖನ ಬಿಡಿಸಿಕೊಂಡು ಹೋಗುತ್ತದೆ.

'ಪ್ರಥಮ ಚುಂಬನ' ಲೇಖನದಲ್ಲಿ ಪ್ರಥಮ ಚುಂಬನದ ರೋಮಾಂಚಕ ಕಥೆ ಬಂದಿದ್ದರೆ, ಈ ಪ್ರಬಂಧ ಸಂಕಲನದ ಕೊನೆಯ ಲೇಖನ 'ನಿವೃತ್ತಿ' ಪ್ರತಿಯೊಬ್ಬರ ಬಾಳ ಘಟ್ಟದಲ್ಲಿ ಬರುವ ಸ್ಥಿತ್ಯಂತರ. ಉದ್ಯೋಗಸ್ಥರು ನಿವೃತ್ತರಾದರೂ ರಾಜಕೀಯ ಪುಢಾರಿಗಲು ನಿವೃತ್ತರಾಗದ ಬಗ್ಗೆ ಲೇಖಕರು ಆಶ್ಚರ್ಯ ವ್ಯಕ್ತಪಡಿಸಿ ನಿವೃತ್ತಿಯ ನಂತರ ಸಾಮಾನ್ಯರ ಬದುಕನ್ನು ಚಿತ್ರಿಸಿದ್ದಾರೆ.

ಅಂತೂ ಈ 'ಕಾವೇರಮ್ಮನ ಸಂಗೀತ ಕಛೇರಿ' ಪ್ರಬಂಧ ಸಂಕಲನ ಅಥವಾ ಹರಟೆ ಸಂಕಲನ ಓದಿಸಿಕೊಂಡು ಹೋಗುತ್ತದೆ. ಕೆಲವು ಪ್ರಬಂಧಗಳಲ್ಲಿ ವಿಷಯಕ್ಕೆ ಒತ್ತು ಹೆಚ್ಚು ಕೊಡಲಾಗಿದೆ ಮತ್ತು ಕೆಲವು ಪ್ರಬಂಧಗಳಲ್ಲಿ ಹಾಸ್ಯಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಹಾಸ್ಯದ ಜೊತೆಯಲ್ಲಿ ವಿಷಯವನ್ನು ಪ್ರತಿಪಾದಿಸಿದರೆ ಆ ಲೇಖನ ಓದುಗರನ್ನು ಮತ್ತಷ್ಟು ತೀವ್ರವಾಗಿ ತಟ್ಟಬಹುದು. ಕೃತಿಯ ಹೆಚ್ಚಿನ ಲೇಖನಗಳ ಬಗ್ಗೆ ಇಲ್ಲಿ ಉಲ್ಲೇಖ ಮಾಡುವ ಪ್ರಯತ್ನ ಮಾಡಿದ್ದೇನೆ. ಮುಂಬರುವ ದಿನಗಳಲ್ಲಿ ಆತ್ಮೀಯರಾದ ರಾಘವೇಂದ್ರ ಉಡುಪಿ ಅವರ ಲೇಖನಿಯಲ್ಲಿ ಇನ್ನಷ್ಟು ಉತ್ತಮ ಕೃತಿಗಳು ಹರಿದು ಬರಲೆಂದು ಆಶಿಸುತ್ತಾ ಅವರನ್ನು ಕೃತಿಯನ್ನು ಪ್ರಕಟಿಸಿರುವ ಪುಸ್ತಕನಿಧಿ ಪ್ರಕಾಶನದವರನ್ನು ಅಭಿನಂದಿಸುತ್ತಿದ್ದೇನೆ.

## ದುರಂತ

ಅಪ್ಪ ಬದುಕಿದ್ದಾಗ...
ಉಪವಾಸ ಹಾಕಿದ
ಮಕ್ಕಳು..
ಸತ್ತಾಗ
ಊರ ಜನರಿಗೆ
ಬಡಿಸಿದರು
ಮೃಷ್ಟಾನ್ನ ಭೋಜನ!

## ವಿಪರ್ಯಾಸ

ನಿನ್ನೆ....
'ನೀನೇ ನನ್ನ
ಜೀವದ ಗೆಳೆಯ'!
ಇಂದು...
'ನೀನೇ ನಮ್ಮ
ಮಹಾನ್ ಶತ್ರು'!
ವಿಪರ್ಯಾಸದ ಸಂತೆ
ನಮ್ಮ ರಾಜಕಾರಣ!

- ಶೋಭಾ ಪ್ರಮೋದ್

# ವಿಸ್ಮಯದ ಕವನ



- ಹೇಮಾ ಎಸ್. ಅಮೀನ್

ಕ್ಷಿತಿಜದ ಅಂಚಿನಲ್ಲಿ ಹಾಯುತ್ತಾ ಕಣ್ಣು
ವಿಸ್ಮಯ ಆವರಿಸಿತು, ಮನವು ಕೇಳಿತು
ಬಾನು ನೀರೊಳಗೋ, ಬಾನಲ್ಲಿ ನೀರೋ?
ನಕ್ಕಿತು ಬಾನು, ಕಡಲೇ ನನ್ನೊಳಗೆ ನಾನೇ
ಕಡಲೊಳಗೆ, ಋತು ಚಕ್ರ
ತಿರುಗಿದಂತೆ ತಿರುಗುವೆವು ನಾವು.
ಅದೇ ಬೀಜವ ಕಂಡು ಜಾಗೃತವಾಯ್ತು ಪ್ರಶ್ನೆ
ಬೀಜ ಮರದೊಳಗೋ, ಬೀಜದೊಳಗೆ ಮರವೋ
ಪುಟ್ಟ ಬೀಜವು ನಕ್ಕು ನುಡಿಯಿತು, ನಾವಿಬ್ಬರೂ
ಒಬ್ಬರೊಳಗೊಬ್ಬರು, ನಾನೇ ಮಣ್ಣ ಉದರದಿ ಸೇರಿ
ಹಚ್ಚ ಹಸಿರ ಸಿರಿಯನು ತರುವೆ ಜಗಕೆಂದಿತು.
ಕೇಳಿದೆ ಆಗ ಬದುಕಿನಲ್ಲೂ ಒಂದು ಪ್ರಶ್ನೆ
ಸುಖ ದುಃಖದೊಳಗೋ, ದುಃಖ ಸುಖದೊಳಗೋ?
ಮಂದಹಾಸ ಬೀರುತ್ತಾ ಬದುಕೆಂದಿತು ಅವೆರಡೂ
ನನ್ನೊಳಗೆ, ರಾತ್ರಿ ಹಗಲಂತೆ ಅವಿತಿರುವವರು
ಅರಿತು ಬಾಳಿದರೆ ನಾನೇ ಸಾರ್ಥಕವಾದಂತೆ
ಕೊನೆಯ ಪ್ರಶ್ನೆ ನನ್ನಲ್ಲೇ ಕೇಳಿದೆ ನಾನು
ಭಾವ ಮನದೊಳಗೋ, ಭಾವನೆಯಲ್ಲಿ ಮನವೋ?
ಇದೆಂತಹ ಪ್ರಶ್ನೆ, ನಾವಿಬ್ಬರೂ ನಿನ್ನೊಳಗೆ
ಸ್ಪಂದಿಸಿದಾಗ ಒಬ್ಬರನ್ನೊಬ್ಬರು ಚಿಗುರುವದೇ
ಚಿಂತನೆ ಭರಿತವಾದ ಕವನ ಎಂದಿತು.

# ನೀ ಕವಿತೆಯಾದೆ

ಭಾವಗಳ ಲೋಕದಲಿ ನೀ ಭಾವನೆಯಾದೆ
ಬಾಳಿನ ಪುಟದಲ್ಲಿ ನೀ ಲೇಖನಿಯಾದೆ
ಕಲ್ಲಿನ ಮನಸನು ಕೆತ್ತಿ ನೀ ಶಿಲ್ಪಿಯಾದೆ
ಪ್ರೀತಿಸಲು ಕಲಿಸಿದೆ ನೀ ಪ್ರೇಯಸಿಯಾದೆ

ಬತ್ತಿದ ನಯನಗಳಿಗೆ ನೀ ಕನಸಾದೆ
ಪ್ರೀತಿಯ ತೇರಿಗೆ ನೀ ಗಾಲಿಯಾದೆ
ಒಲವಿನಾ ಬೀಜವ ಬಿತ್ತಿ ನೀ ಸ್ನೇಹಿತೆಯಾದೆ
ಬದುಕಿನ ಅರ್ಥವಾ ತಿಳಿಸಿ ನೀ ಸಂಗಾತಿಯಾದೆ



ಬಾಳೆಂಬ ಸಂಗೀತಕ್ಕೆ ನೀ ಪಲ್ಲವಿಯಾದೆ
ಹೃದಯದಾ ದೇಗುಲಕೆ ನೀ ದೇವತೆಯಾದೆ
ಬದುಕೆಂಬ ನೌಕೆಗೆ ನೀ ಜೊತೆಯಾದೆ
ಪದಗಳೆಂಬ ಉಸಿರಲ್ಲಿ ನೀ ಕವಿತೆಯಾದೆ.

- ಶಶಿಕುಮಾರ್ ವಿ. ಕುಲಾಲ್, ನವಿ ಮುಂಬಯಿ

# ಮುಂಬಯಿ ವಿಶ್ವ ವಿದ್ಯಾಲಯದಲ್ಲಿ ರಂಗೇರಿದ ರಂಗಸಂವಾದ

ಕನ್ನಡ ವಿಭಾಗದಲ್ಲಿ ನಡೆದ ರಂಗಸಂವಾದ ಕಾರ್ಯಕ್ರಮದಲ್ಲಿ ಶ್ರೀಪಾದ ಭಟ್ ಅವರು ರಂಗಭೂಮಿಯ ವಿರಾಟ್ ಸ್ವರೂಪವನ್ನು ತೆರೆದಿಟ್ಟರು ಎಂದರೆ ತಪ್ಪಾಗಲಾರದು. ಅವರ ಮಾತಿನ ತಿರುಳು ರಂಗಭೂಮಿಯ ಆಸಕ್ತರಿಗೆ ತಲುಪಲಿ ಎಂಬ ಉದ್ದೇಶ ನಮ್ಮದು. ಅದರ ಸಾರಾಂಶ ಇಲ್ಲಿದೆ.

ಮುಂಬೈ ಬರೇ ವಾಣಿಜ್ಯ ನಗರವಲ್ಲ. ಇದು ಸಾಂಸ್ಕೃತಿಕ ನಗರಿಯೂ ಹೌದು. ಮುಂಬೈಯಲ್ಲಿ ಬಹುಭಾಷೆಗಳ ಸಾಂಸ್ಕೃತಿಕ ಪರಿಚಾರಿಕೆ ದಿನವಹಿ ನಡೆಯುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಕನ್ನಡಿಗರೂ ಹಿಂದೆ ಬಿದ್ದಿಲ್ಲ. ಇತ್ತೀಚೆಗೆ ಕನ್ನಡ ವಿಭಾಗದಲ್ಲಿ ಭಿನ್ನಪರಿಯ ರಂಗಸಂವಾದವೊಂದು ನಡೆಯಿತು. ಇದನ್ನು ನಡೆಸಿಕೊಟ್ಟವರು ಕ್ರಿಯಾಶೀಲ ರಂಗಕರ್ಮಿ ಡಾ.ಶ್ರೀಪಾದ ಭಟ್.

ಕನ್ನಡ ಕಲಾಕೇಂದ್ರದ ಆಶ್ರಯದಲ್ಲಿ ನಡೆಯಲಿರುವ ರವೀಂದ್ರನಾಥ ಠಾಗೋರ್ ವಿರಚಿತ 'ಚಿತ್ರಾ' ನಾಟಕದ ನಿರ್ದೇಶಕರಾದ ಡಾ.ಶ್ರೀಪಾದ ಭಟ್ ಅವರು ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದಲ್ಲಿ 'ರಂಗಸಂವಾದ' ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. ಕನ್ನಡದ ಕ್ರಿಯಾಶೀಲ ರಂಗ ತಜ್ಞರಲ್ಲಿ ಶ್ರೀಪಾದ ಭಟ್ ಅವರು ಒಬ್ಬರು. ಸೃಜನಶೀಲ ನಿರ್ದೇಶನಾಕ್ಕೆ ಹೆಸರಾಗಿರುವ ಅವರು ಅನೇಕ ಮಹತ್ವದ ನಾಟ್ಕಗಳನ್ನು ನಿರ್ದೇಶಿಸಿ ರಂಗದ ಮೇಲೆ ಪ್ರದರ್ಶಿಸಿದ್ದಾರೆ. ಇವರ ನಾಟಕಗಳು ಕರ್ನಾಟಕದಲ್ಲಿ ಮಾತ್ರವಲ್ಲದೇ ಮುಂಬಯಿ, ಹೈದರಾಬಾದ್, ದಿಲ್ಲಿ ಮುಂತಾದ ಕಡೆ ಪ್ರದರ್ಶನಗೊಂಡಿದೆ. ಶ್ರೀಪಾದ್ ಭಟ್ ಅವರು ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಸಂಪನ್ಮೂಲ ನಿರ್ದೇಶಕರಾಗಿ, ರಾಜ್ಯ ಸಮುದಾಯ ಸಂಘಟನೆಯ ರಾಜ್ಯ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀಪಾದ ಭಟ್ ಅವರು ನಿರ್ದೇಶಿಸಿದ ನಾಟಕಗಳು, ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿವೆ. ಅನೇಕ ಪ್ರಶಸ್ತಿ, ಪುರಸ್ಕಾರಗಳಿಗೂ ಅವರು ಭಾಜನರಾಗಿದ್ದಾರೆ.

ಕನ್ನಡ ವಿಭಾಗದಲ್ಲಿ ನಡೆದ ರಂಗಸಂವಾದ ಕಾರ್ಯಕ್ರಮದಲ್ಲಿ ಶ್ರೀಪಾದ ಭಟ್ ಅವರು ರಂಗಭೂಮಿಯ ವಿರಾಟ್ ಸ್ವರೂಪವನ್ನು ತೆರೆದಿಟ್ಟರು ಎಂದರೆ ತಪ್ಪಾಗಲಾರದು. ಅವರ ಮಾತಿನ ತಿರುಳು ರಂಗಭೂಮಿಯ ಆಸಕ್ತರಿಗೆ ತಲುಪಲಿ ಎಂಬ ಉದ್ದೇಶ ನಮ್ಮದು. ಅದರ ಸಾರಾಂಶ ಇಲ್ಲಿದೆ. ಕನ್ನಡ ವಿಭಾಗ ಅಕಾಡೆಮಿಕ್ ಆಗಿ ಕೊಟ್ಟ ವಿಷಯ 'ರಂಗಭೂಮಿ–ನಿನ್ನೆ, ಇಂದು, ನಾಳೆ' ಈ ವಿಷಯವನ್ನು ನೋಡಿ ಒಂದು ಕ್ಷಣ ಭಯಪಟ್ಟೆ. ಆದರೆ ಈ ವಿಷಯದಿಂದ ನನಗಾದ ಲಾಭ ಎಂದರೆ ಈ ವಿಷಯದ ಕುರಿತು ಈ ತನಕ ಎಷ್ಟು ಜನ ಮಾತನಾಡಿದ್ದಾರೆ ಎಂದು ತಿಳಿಯುವ ಆಸಕ್ತಿ ಒಂದೆಡೆಯಾದರೆ, ಏನು ಮಾತನಾಡಿರಬಹುದು ಎಂಬ ಕುತೂಹಲಕ್ಕೂ ಅದು ಎಡೆ ಮಾಡಿಕೊಟ್ಟಿತು. ಜೊತೆಯಲ್ಲಿ ಕೀರ್ತಿನಾಥ ಕುರ್ತುಕೋಟಿಯವರ 'ರಂಗಭೂಮಿ–ಅಂದು–ಇಂದು'ಎಂಬ ಒಂದು ಒಳ್ಳೆಯ ಪುಸ್ತಕವನ್ನು ಓದಲು ಅವಕಾಶ ಮಾಡಿಕೊಟ್ಟಿತು. ನಮಗೆ ಎಲ್ಲಿ ಅವಕಾಶಗಳು ದೊರೆಯುತ್ತವೆಯೋ ಅಲ್ಲಿ ಕಲಿಯಲು ಏನು ಸಿಗುತ್ತದೆ ಎಂಬುದು ಮುಖ್ಯವಾಗುತ್ತದೆ ಎಂದು ಶ್ರೀಪಾದ ಭಟ್ ಅವರು ತಮ್ಮ ಮಾತನ್ನು ಆರಂಭಿಸಿದರು.

ರಂಗಭೂಮಿಯ ಬಗ್ಗೆ ನಿರರ್ಗಳವಾಗಿ ಮಾತನಾಡಿದ ಡಾ.ಶ್ರೀಪಾದ ಭಟ್ ಅವರ ಮಾತಿನ ಸಾರಾಂಶವನ್ನು ಸ್ವಲ್ಪದರಲ್ಲಿ ತಿಳಿಸುವ ಸಣ್ಣ ಪ್ರಯತ್ನವಿಲ್ಲಿದೆ. "ರಂಗಭೂಮಿ ಅಂದರೆ ಸಾಂಸ್ಕೃತಿಕವಾದ ಚಟುವಟಿಕೆಗಳನ್ನು ಒಟ್ಟಿಗೆ ಅಭಿವ್ಯಕ್ತಿಸುವುದು. ಕಾಲಕ್ಕೆ ತಕ್ಕಂತೆ ಹಲವು ಸ್ಥಿತ್ಯಂತರಗಳನ್ನು ತನ್ನ ಒಡಲೊಳಗೆ ಇಟ್ಟುಕೊಂಡು ಪಾಕ ಮಾಡುವ ಕಲೆಯೇ ರಂಗಕಲೆ. ರಂಗಭೂಮಿಯ ತಾಕತ್ತಿರುವುದೇ ತ್ರಿಕಾಲದಲ್ಲಿ. ಯಕ್ಷಗಾನ, ನಾಟಕಗಳಲ್ಲಿ ಕಥನದ ಜೊತೆಗೆ ಭೂತ, ವರ್ತಮಾನ ಹಾಗೂ ಭವಿಷ್ಯದ ಮಾತುಗಳು ಪಲ್ಲಟವಾಗುತ್ತಿರುತ್ತವೆ. ಅದು ಹೆಚ್ಚು ಜನರಿಗೆ ಗೊತ್ತೇ ಇರುವುದಿಲ್ಲ ಎಂದು ಸೋದಾಹರಣವಾಗಿ ವಿವರಿಸಿದರು.

ಕೇವಲ ರಂಗಕಲೆಯೇ ಉದ್ದೇಶವಾಗಿ ಇಲ್ಲದಿರುವುದನ್ನು ಅರೆ ರಂಗಕಲೆ



ಎನ್ನುತ್ತೇವೆ. ರಂಗಭೂಮಿಯಲ್ಲಿ ಪಾರ್ಸಿ ನಾಟಕಗಳು ಮಿಂಚಲು ಆರಂಭವಾಯಿತು..ನಮ್ಮಲ್ಲಿದ್ದ ಒಳ್ಳೆಯ ಕಥೆ ಹಾಗೂ ಪಾರ್ಸಿಗಳ ರಂಗಭೂಮಿಯ ಸ್ವರೂಪವನ್ನು ಬೆರೆಸಿ ನಾಟಕವನ್ನು ಮಾಡಿದರು. ಅದು ಯಶಸ್ವಿಯಾಯಿತು. ಪ್ರೇಕ್ಷಕರ ಮನಗೆಲ್ಲಲು ಅವರಿಗೆ ಸಾಧ್ಯವಾಯಿತು. ನಂತರ ಕಂಪನಿ ನಾಟಕಗಳು ತಲೆ ಎತ್ತಿದವು.. ಭಾವತನ್ಮಯತೆ, ಅಭಿನಯ ಕೌಶಲವನ್ನು ಕಂಪನಿ ನಾಟಕಗಳು

**ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ**

ಹೇಳಿಕೊಟ್ಟವು.

ನಾಟಕ ರಚನೆಗಾಗಿ ವರ್ಷಾನುಗಟ್ಟಲೆ ಸಮಯವನ್ನು ತೆಗೆದು ಕೊಂಡವರು ಗಿರೀಶ್ ಕಾರ್ನಾಡರು. ಸಾಹಿತ್ಯ ಮತ್ತು ಸ್ವರೂಪ ಎರಡನ್ನೂ ಉಪಯೋಗಿಸಿ ಕೊಂಡು ನಾಟಕ ರಚನೆ ಮಾಡಿದವರು ಕಾರ್ನಾಡರು. ಆಗ ರಂಗಮಂಚದ ಮೇಲೆ ನಾಟಕ ತರುವುದು ದೊಡ್ಡ ಸಾಹಸದ ಕೆಲಸವಾಗಿತ್ತು. ನಾಟಕದ ರಚನೆ ಮಾಡಿದವರು, ನಿರ್ದೇಶಕರು, ಹಾಗೂ ನಟರ ನಡುವೆ ನಿಕಟವಾದ ಸಂಬಂಧವಿತ್ತು. ನಾಟಕ ರಚಿಸುವವನು ಮನೆ ಕಟ್ಟಿಕೊಟ್ಟಂತೆ. ನಾಟಕದ ನಿರ್ದೇಶಕ ಅದರ ಬಾಡಿಗೆದಾರ. ಆತ ಮನೆಯಲ್ಲಿನ ಸಾಮಾನನ್ನು ತನಗೆ ಇಷ್ಟಬಂದ ಜಾಗಕ್ಕೆ ಸ್ಥಳಾಂತರಿಸಬಹುದು. ಆದರೆ ಮನೆ ಕಟ್ಟಿದ್ದು ಸರಿಯಿಲ್ಲವೆಂದು ಗೋಡೆಗಳನ್ನು ಕೆಡಹುವ ಅಧಿಕಾರ ಅವನಿಗೆ ಇಲ್ಲವೆಂದು ಬಹಳ ಮಾರ್ಮಿಕವಾದ ನಿದರ್ಶನವನ್ನು ನೀಡಿದ ಶ್ರೀಪಾದ ಭಟ್ ಅವರು ತಮ್ಮ ವಾಕ್ಚಾತುರ್ಯದಿಂದ ನೆರೆದವರನ್ನು ಬೆರಗುಗೊಳಿಸಿದರು.

ಇಂದು ರಂಗಭೂಮಿ ಯಾವ ರೀತಿಯ ಬೆಳವಣಿಗೆಯನ್ನು ಕಂಡಿದೆ, ಕಾಣುತ್ತಿದೆ ಎಂಬುದರ ಕುರಿತು ಸತ್ಯಾಸತ್ಯತೆಯನ್ನು ತೆರಿದಿಟ್ಟ ಶ್ರೀಪಾದ ಭಟ್ ಅವರು " ರಂಗಭೂಮಿ ಶ್ರೀಮಂತವಾಗಬೇಕಾದುದು ಅಭಿನಯದಿಂದಲೇ ಹೊರತು ಹಣದಿಂದಲ್ಲ. ರಂಗಭೂಮಿಗೆ ಇಂದು ಸಿರಿಗರ ಬಡಿದಿದೆ. ಆದರೆ ನಾಟಕದಲ್ಲಿ ಸರಳತನದಲ್ಲಿ ಮ್ಯಾಜಿಕ್ ಅಡಗಿರುತ್ತದೆ. ಕುಮಾರ ತುಳಸಿ ಉದಕದ ರೀತಿಯಲ್ಲಿ ನಾಟಕದಲ್ಲಿ ಸರಳತೆಯನ್ನು ರಂಗಭೂಮಿ ಬಳಸಿಕೊಳ್ಳಬೇಕು.

ಇದನ್ನು ನಾವು ಮರೆತಿದ್ದೇವೆ. ಆಡಂಬರದಿಂದಾಗಿ ನಟರ ಅಭಿನಯಕ್ಕೆ ಧಕ್ಕೆ ಬರುತ್ತಿದೆ. ನಿರ್ದೇಶಕನಾದವನು ನಟನ ಒಳಗಿನ ಪ್ರತಿಭೆಯನ್ನು ಹೊರತರುವ ಪ್ರಯತ್ನವನ್ನು ಮಾಡಬೇಕು. ಅಂತಹ ಪ್ರಯತ್ನ ನಡೆಯುತ್ತಿಲ್ಲ ಎನ್ನುವುದು ಖೇದಕರ ವಿಷಯ. ರಂಗಭೂಮಿಯ ಜೊತೆ ಭೂಮಿ ಇದೆ. ರಥದಲ್ಲಿಯೇ ಯುದ್ಧಕ್ಕೆ ಬರುವ ಕೌರವನಿಗೆ ತನ್ನ ತಪ್ಪಿನ ಅರಿವಾದದ್ದು ಆತನ ರಥ ಮುರಿದು ಆತನ ಕಾಲಿಗೆ ಭೂಮಿಯ ಸ್ಪರ್ಶ ಆದನಂತರವೇ ಎಂದು ಮಾರ್ಮಿಕವಾದ ಉದಾಹರಣೆಯನ್ನು ನೀಡಿದರು.

ಮಹಾಭಾರತದ ಕಥೆಯನ್ನಾಧರಿಸಿ ಹಲವಾರು ನಾಟಕ, ಯಕ್ಷಗಾನಗಳು ಬಂದಿವೆ. ಹೆಚ್ಚಿನವರು ಮೂಲವನ್ನು ಓದಿರುವುದಿಲ್ಲ. ಆದರೆ ನಾಟಕ, ಯಕ್ಷಗಾನದ ಸಂಭಾಷಣೆಗಳು, ಕಥೆಗಳು ಜನರನ್ನು ತಟ್ಟಿರುವುದು ಅಭಿನಯದಿಂದ, ವಾಕ್ಚಾತುರ್ಯದಿಂದ. ಇಡೀ ರಾತ್ರಿ ಯಕ್ಷಗಾನ ನಡೆಯುತ್ತಿದ್ದ ಕಾಲದಲ್ಲಿ ಅದರ ವೇಷಭೂಷಣ ಜನರನ್ನು ಆಕರ್ಷಿಸುತ್ತಿತ್ತು. ಅವರು ತಮ್ಮ ಮಾತು, ಹಾಸ್ಯಗಳ ಮೂಲಕ ಜನರ ಮನಸನ್ನು ಸೆಳೆಯುತ್ತಿದ್ದರು. ವೇಷಭೂಷಣಗಳ ಕಲ್ಪನೆಯೂ ದೇವರ ಚಿತ್ರಗಳನ್ನು ನೋಡಿಯೇ ಮಾಡಿರುವಂತದ್ದು. ನಾಟಕದಲ್ಲಿ ಪೌರಾಣಿಕ ಕಥೆಗಳನ್ನು ಬಹುಸೊಗಸಾಗಿ ಮೂಡಿಸಲು ಸಾಧ್ಯ ಎಂದ ಶ್ರೀಪಾದ ಭಟ್ ಅವರು ಹೇಳಿದ ಸುಂದರವಾದ ಕಥೆ ಈ ರೀತಿಯಾಗಿದೆ. ಒಬ್ಬಳು ಅಜ್ಜಿ ಕಥೆ ಹೇಳುವುದರಲ್ಲಿ ನಿಸ್ಸೀಮಳು. ಅವಳ ಬಳಿ ಕಥೆ ಕೇಳಲು ಬರುವವರಿಂದ ಚಿನ್ನದ ನಾಣ್ಯ ತೆಗೆದುಕೊಳ್ಳುತ್ತಿದ್ದಳು. ಒಂದು ದಿನ ಅಜ್ಜಿಯ ಬಳಿ ದೇವದತ್ತ ಎನ್ನುವವನು ಕಥೆ ಕೇಳಲು ಬರುತ್ತಾನೆ. ಅವನನ್ನು ಬ್ರಹ್ಮ ರಾಕ್ಷಸ ತಡೆಯುತ್ತಾನೆ. ಅವನನ್ನು ತಿನ್ನುವ ಇಚ್ಛೆ ವ್ಯಕ್ತ ಪಡಿಸುತ್ತಾನೆ. ಆಗ ಅವನು ಕಥೆ ಕೇಳಿ ಬರುವುದಾಗಿ ಹೇಳುತ್ತಾನೆ. ಹಾಗೆ ಬಂದ ಅವನಲ್ಲಿ ಅಜ್ಜಿ ಹೇಳಿದ ಕಥೆಯನ್ನು ಹೇಳುವಂತೆ ಹೇಳುತ್ತಾನೆ. ಕಥೆ ಕೇಳಿದಾಗ ರಾಕ್ಷಸನಿಗೆ ಒಂದು ಸತ್ಯದ ಅರಿವಾಗುತ್ತದೆ. ಒಮ್ಮೆ ಸಿಕ್ಕವರು ಮತ್ತೊಮ್ಮೆ ಸಿಕ್ಕಿದಾಗ ಅವರು ನೆಂಟರಾಗುತ್ತಾರೆ. ಆದ್ದರಿಂದ ನೀನು ನನ್ನ ನೆಂಟನಾದಂತೆ. ನೆಂಟನನ್ನು ಹೇಗೆ ತಿನ್ನಲಿ ಹೋಗು ಎಂದು ಅವನನ್ನು ಕಳುಹಿಸಿಕೊಡುತ್ತಾನೆ. ನೆಂಟರನ್ನು ಯಾರಾದರೂ ತಿನ್ನುತ್ತಾರೇನು? ಎಂದು ಅಜ್ಜಿ ಕಥೆಯನ್ನು ಸ್ವಾರಸ್ಯಕರವಾಗಿ ತಿಳಿಸಿದರು.

ನಾಟಕಗಳಲ್ಲಿ ಎರಡು ವಿಧಗಳಿವೆ. ಒಂದು ನಟ ಕೇಂದ್ರಿತ, ಇನ್ನೊಂದು ನಿರ್ದೇಶಕ ಕೇಂದ್ರಿತ. ನಿರ್ದೇಶಕ ಕೇಂದ್ರಿತ ವ್ಯವಸ್ಥೆ ಬಂದ ಮೇಲೆ ಅಲ್ಲಿ ನಟ ಸ್ಥೂಲವಾಗಿರುತ್ತಾನೆ. ಆತ ಸಾಧನ ಮಾತ್ರವಾಗುತ್ತಾನೆ. ಸಿದ್ಧವಿರುವ ಪಠ್ಯಕ್ಕೆ ಪ್ಯಾರಲಾಲ್‌ನ್ನು ನಿರ್ದೇಶಕ ಕೊಡುವಾಗ ಅಲ್ಲಿ ನಟ ಮಾತ್ರ ಪ್ರಮುಖನಾಗಬಾರದು. ಚಿಟ್ಟಾಣಿಯಂತ ನಟರು ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸುವವರೆಗೆ ಕುಣಿಯುತ್ತಿದ್ದರು. ಆದರೆ ಈಗ ನಟನೆ ಹಿಂದೆ ಸರಿಯಿತು. ಪಠ್ಯ ಹಿಂದೆ ಸರಿಯಿತು. ನಿರ್ದೇಶಕ ಮುಂದಲೆಗೆ ಬಂದ. ನಿರ್ದೇಶಕರಾದವನು ಸೂಕ್ಷ್ಮಜ್ಞನಲ್ಲದಿದ್ದರೆ ಆಗ ನಟನಿಗೆ ಸಮಸ್ಯೆಯಾಗುತ್ತದೆ. ನಟ ಇನ್ಸ್ಟಾಲೇಶನ್‌ಗೆ ಒಳಪಡುವ ವಸ್ತುವಿನಂತೆ ಆಗಿದ್ದಾನೆ. ಈಗ ಅದು ದಾಟಿಹೋಗಿದೆ. ನಟಕೇಂದ್ರಿತವೂ ಅಲ್ಲ, ನಿರ್ದೇಶಕ ಕೇಂದ್ರಿತವೂ ಅಲ್ಲ. ಈಗ ಉಳಿದಿರುವುದು ಕೊನೆಯದಾಗಿ ಪರಿಕರ ಕೇಂದ್ರಿತ ನಾಟಕ. ಇದು ಯಾಕೆ ಆರಂಭವಾಯಿತು ಅಂದರೆ ನಟನನ್ನು ನಾವು ಕಳೆದು ಕೊಂಡುಬಿಟ್ಟಿದ್ದೇವೆ. ನಟನಿಗೆ ಬೇಕಾದಂತಹ ಎನರ್ಜಿ, ಸೋರ್ಸ್ ಇಲ್ಲದಾಗ ನಾಟಕ ಪೇಲವವಾಗತೊಡಗಿತು. ನಾಟಕ ಪೇಲವವಾಗದೇ ಪ್ರೇಕ್ಷಕನನ್ನು ಆಕರ್ಷಿಸುವುದಕ್ಕಾಗಿ ಅತ್ಯುತ್ತಮವಾದ ಪರಿಕರಗಳನ್ನು ಉಪಯೋಗಿಸಲಾಗುತ್ತದೆ. ದೊಡ್ಡ ದೊಡ್ಡ ಸೆಟ್‌ಗಳನ್ನು ಅಳವಡಿಸಲಾಗುತ್ತದೆ. ಎರಡನೇ ಪ್ರಾಪರ್ಟಿಯ(ರಂಗ ಪರಿಕರ) ಮೂಲಕ ನಟನ ದೌರ್ಬಲ್ಯವನ್ನು ಮರೆಮಾಡುವ ಕೆಲಸವನ್ನು ಮಾಡಲಾಯಿತು. ಹೆಸರಾಂತ ನಟರು ಕಥೆಯ ಅಗತ್ಯಕ್ಕನುಸಾರವಾಗಿ ಪಾತ್ರವಾಗಿ ಬಂದರೂ ಜನರನ್ನು ಆಕರ್ಷಿಸುವುದು ಉಳಿದ ಮ್ಯಾಜಿಕ್ ಮೂಲಕ. ಹೀಗೆ ಪರಿಕರ ಕೇಂದ್ರಿತವಾದ, ತಾಂತ್ರಿಕ ವೈಭವಕೇಂದ್ರಿತ ನಾಟಕಗಳು ಆರಂಭವಾದಂದಿನಿಂದ ನಾಟಕಕ್ಕೆ ಈ ರೋಗ ಶುರುವಾಯಿತು. ಅದನ್ನು ಕಡಿಮೆ ಮಾಡಿ ನಟನ ಜವಾಬ್ದಾರಿಯನ್ನು ಹೆಚ್ಚು ಮಾಡುತ್ತಾ ಹೋದಾಗ ನಾಟಕ ಯಶಸ್ಸಾಗುತ್ತದೆ. ರಂಗಭೂಮಿ ಆ ಕಾಲದ ಕಥೆಯನ್ನು ಹೇಳಬೇಕು. ರಸ ಹುಟ್ಟಬೇಕಾದದ್ದು ಪ್ರೇಕ್ಷಕನಲ್ಲಿ. ಅದು ಅವನಿಗೆ ನಟನೆಯ ಒಂದು ತಂತ್ರ. ಅವರಲ್ಲಿ ರಸ ಉತ್ಪತ್ತಿಯಾಗಬಲ್ಲ ಸನ್ನಿವೇಶವನ್ನು ಸೃಷ್ಟಿಮಾಡಬಲ್ಲ ತಾಕತ್ತನ್ನು ನಟನ ಮೂಲಕ ಸೃಷ್ಟಿಮಾಡಬೇಕು. ಅದು ಒಬ್ಬ ಒಳ್ಳೆಯ ನಿರ್ದೇಶಕನಿಂದ ಸಾಧ್ಯ. ನಟನಾದವನಿಗೂ ಕೆಲವು ಜವಾಬ್ದಾರಿಗಳಿರುತ್ತವೆ. ನಟನೆ ಎಂದರೆ ಸಾತ್ವಿಕತೆ ಇರಬೇಕು. Body language ಚೆನ್ನಾಗಿರಬೇಕು. ಒಳ್ಳೆಯ ಭಾಷೆಯ ಅರಿವಿರಬೇಕು. ಕಾವ್ಯಾತ್ಮಕತೆ ಇರಬೇಕು. ಒಳ್ಳೆಯ ನಾಟಕ ಇಡೀ ತಂಡದ ಶ್ರಮವನ್ನು ಬಯಸುತ್ತದೆ.

ಅದೇ ರೀತಿ ನಿರ್ದೇಶಕನಿಗೂ ಅವನದ್ದೇ ಆದ ಜವಾಬ್ದಾರಿಗಳಿರುತ್ತವೆ. ರಂಗಭೂಮಿಯ ಕಲ್ಪನೆ ನಿರ್ದೇಶಕನಿಗಿರಬೇಕು. ಕಲಾವಿದರನ್ನು ಗೌರವಿಸಬೇಕು. ನಾಟಕ ಮುಗಿದ ನಂತರ ಪ್ರೇಕ್ಷಕನ ಸಂಶಯಗಳಿಗೆ ಉತ್ತರಿಸಬೇಕಾದುದು ನಿರ್ದೇಶಕ ಹಾಗೂ ನಟನ ಜವಾಬ್ದಾರಿ. ಎನ್.ಎಸ್.ಡಿಯಿಂದ ಓದಿಕೊಂಡು ಬಂದವರಿಗೆ ನಟನೆಗಿಂತ ತಾಂತ್ರಿಕತೆ ಪ್ರಾಮುಖ್ಯವಾಗುತ್ತದೆ. ಸಾಹಿತ್ಯವೂ ಗೌಣವಾಗುತ್ತದೆ. ಆಗ ಅಲ್ಲಿ ನಿರ್ದೇಶಕನಿಗೆ ಪ್ರಾಮುಖ್ಯತೆ ಹೆಚ್ಚಾಗುತ್ತದೆ. ಈಗ ಯಾವ ತಂಡದವರೂ ಕೂಡಾ ನಿರ್ದೇಶಕನಿಗೆ ಹಣಪಾವತಿಸುತ್ತಾರೆ. ಆದರೆ ನಟರಿಗೆ ನೀಡುವುದಿಲ್ಲ. ಆಗ ಅವರು ಸಿನೆಮಾ, ಧಾರವಾಹಿಗಳನ್ನು ಹುಡುಕಿಕೊಂಡು ಹೋಗುವುದು ಅನಿವಾರ್ಯವಾಗುತ್ತದೆ ಎಂದರು.

ಸಂವಾದದಲ್ಲಿ ಪಾಲ್ಗೊಂಡ ನಟ ಮೋಹನ್ ಮಾರ್ನಾಡ್ ಅವರು ಅಲ್ಲಲ್ಲಿ ಓಡಾಡುತ್ತಿರುವ ನಮ್ಮನ್ನು ಡಾ.ಉಪಾಧ್ಯ ಅವರು ಮಧ್ಯೆ ಮಧ್ಯೆ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಮ್ಮಲ್ಲಿ ಕಲಿಯಬೇಕಾದುದು ಬಹಳಷ್ಟಿದೆ ಎನ್ನುವ ಎಚ್ಚರಿಕೆಯನ್ನು ನೀಡುತ್ತಾ ಬಂದಿದ್ದಾರೆ ಎಂದು ಕನ್ನಡ ವಿಭಾಗದ ಕಾರ್ಯವನ್ನು ಶ್ಲಾಘಿಸಿದರು. ಪ್ರೇಕ್ಷಕರನ್ನು ತಯಾರು ಮಾಡುವ ಜವಾಬ್ದಾರಿ ಯಾರದ್ದು ಎನ್ನುವ ಪ್ರಶ್ನೆಯನ್ನು ಎತ್ತಿದ ಮೋಹನ್ ಮಾರ್ನಾಡ್ ಅವರು ಕಷ್ಟಪಟ್ಟು ತಿಂಗಳುಗಟ್ಟಲೆ ರಿಹರ್ಸಲ್ ಮಾಡಿ ನಾಟಕ ಮಾಡುವಾಗ ಪ್ರೇಕ್ಷಕರು ಸ್ಪಂದಿಸುವುದಿಲ್ಲ. ಹಣ ಬೇಕಾದಷ್ಟು ಕೊಡುತ್ತಾರೆ. ಆದರೆ ಸಾಂಸ್ಕೃತಿಕ ಮನಸ್ಸು ಅವರಲ್ಲಿ ಇಲ್ಲ. ಆಗ ನೋವಾಗುತ್ತದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು. ಮುಂಬಯಿಯಲ್ಲಿ ಒಂದು ನಾಟಕ ಪ್ರದರ್ಶನವನ್ನು ಮಾಡಬೇಕಾದರೆ ಕನಿಷ್ಠ ಒಂದು ಲಕ್ಷ ಖರ್ಚು ಬರುತ್ತದೆ. ಕಲಾವಿದರ ೩ ತಿಂಗಳ ಕಷ್ಟ ಒಂದೇ ಶೋಗೆ ಕೊನೆಯಾಗುವುದು ನೋವನ್ನು ನೀಡುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

ಸಿನಿಮಾ ಕಲಾವಿದರಿಗೆ ಸಿಗುವ ಗೌರವ, ಪ್ರಶಸ್ತಿ ಪುರಸ್ಕಾರಗಳು ರಂಗಭೂಮಿಯ ಕಲಾವಿದರಿಗೆ ದೊರೆಯುತ್ತಿಲ್ಲ. ರಂಗಭೂಮಿಗೆ ಸಂಬಂಧಿಸಿದ ಸಂಘಟನೆಗಳು ಸ್ಥಾಪನೆಯಾಗಬೇಕಾದ ಅನಿವಾರ್ಯತೆ ಇರಬಹುದೇ ಎಂದು ತಮ್ಮ ಸಂದೇಹವನ್ನು ಡಾ.ಜಿ.ಎನ್.ಉಪಾಧ್ಯ ಅವರು ಶ್ರೀಪಾದ ಭಟ್ ಅವರ ಮುಂದಿಟ್ಟರು. ಯಜ್ಞನಾರಾಯಣ ಸುವರ್ಣ, ಪದ್ಮನಾಭ ಸಸಿಹಿತ್ಲು , ಸಾ.ದಯಾ, ಡಾ. ಮಮತಾ ರಾವ್ ಮೊದಲಾದವರು ಸಂವಾದದಲ್ಲಿ ಪಾಲ್ಗೊಂಡರು.

ಒಟ್ಟಿನಲ್ಲಿ ಒಂದು ಅರ್ಥಪೂರ್ಣ ಸಂವಾದ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮವನ್ನು ಆಯೋಜಿಸುವಲ್ಲಿ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಎನ್.ಉಪಾಧ್ಯ ಹಾಗೂ ಕನ್ನಡ ಕಲಾಕೇಂದ್ರ ಇದರ ಅಧ್ಯಕ್ಷರಾದ ಬೈಲೂರು ಬಾಲಚಂದ್ರ ರಾವ್ ಅವರು ಅಭಿನಂದನಾರ್ಹರು.

# ಬದುಕಿನಿಂದ ಒಂದಿಷ್ಟು ದೂರ

ಮಂಡೆಹಾಳೆ ತಲೆಗೆ ಕವಚಿಕೊಂಡು ನಸುಕಿನ ಚುಮುಚುಮು ಚಳಿಯಲ್ಲಿ ಸರ್ವೇಶ್ರೀ ಒಡೆಯರ ಮನೆಯ ಬಿಟ್ಟಿ ಕೆಲಸಕ್ಕಾಗಿ ಮನೆಯಿಂದ ಹೊರ ಬೀಳುವ ಸಮಯ ಉಬ್ಬಿನಲ್ಲಿ ಅಗಳು ದಾಟಿ ತಮ್ಮ ಮನೆಯತ್ತಲೇ ಬರುತ್ತಿರುವ ಬಸೀರ ಪಠೇಲ ಕಂಡು ಬಂದ. ಎರಡೂ ಕಿವಿ ಮುಚ್ಚಿಕೊಳ್ಳುವಂತೆ ತಲೆಗೆ ಮಫ್ಲರ್ ಸುತ್ತಿಕೊಂಡು ಕಾಲೆಳೆದುಕೊಳ್ಳುತ್ತಾ ತಾನು ಬರುತ್ತಿರುವ ಮುನ್ಸೂಚನೆಯೆಂಬಂತೆ ಫರ್ಲಾಂಗು ದೂರದಿಂದಲೆ ಗಟ್ಟಿಯಾಗಿ ಕೆಮ್ಮುತ್ತಾ ಆಗಮಿಸುವ ಬಸೀರ ಪಠೇಲನ ಪರಿಚಯ ಸರ್ವೇಶ್ರಿಗೇನೂ ಹೊಸದಲ್ಲ. ಯಜಮಾನರು ಆತ್ಮಹತ್ಯೆ ಮಾಡಿಕೊಂಡು ತನ್ನನ್ನೂ ತನ್ನ ಮೂವರು ಮಕ್ಕಳನ್ನೂ ಅನಾಥರನ್ನಾಗಿ ಬಿಟ್ಟು ಹೋದ ಆ ಸಂದರ್ಭದಲ್ಲಿ ದೇವರಂತೆ ಬಂದು ಸಹಾಯ ಮಾಡಿದ ಈ ಬಸೀರ ಪಠೇಲನ ಸಹವಾಸ ಬಿಸಿತುಪ್ಪ ಬಾಯಿಗೆ ಹಾಕಿಕೊಂಡಂತೆ ಅಂತ ಸರ್ವೇಶ್ರಿಗೆ ಗೊತ್ತಾದದ್ದು ಮೊನ್ನೆ ಮೊನ್ನೆ. ಬಸೀರಪಠೇಲ ಒಳ್ಳೆಯವನಲ್ಲ. ಅವನೊಬ್ಬ ನೀಚ. ಅವನ ಸಹವಾಸ ದೇವರಿಗೂ ಬೇಡ ಅಂತ ಅವರಿವರ ಬಾಯಿಯಿಂದ ಸರ್ವೇಶ್ರಿ ಕೇಳಿದ್ದರೂ ಏಕೋ ಏನೋ ಅವಳಿಗೆ ಅವನ ವಿಷಯದಲ್ಲಿ ಒಂದು ರೀತಿಯ ಸದಭಿಪ್ರಾಯವಿತ್ತು. ಆದರೆ ಮೊನ್ನೆಯ ಘಟನೆಯ ನಂತರ ಮಾತ್ರ ಯಾರಾದರೂ ಅವನ ಹೆಸರು ಎತ್ತಿದರೂ ಸಾಕು. ಸರ್ವೇಶ್ರಿ ಕೆಂಡ ಕಾರಲಿಕ್ಕೆ ಪ್ರಾರಂಭಿಸಿದ್ದಾಳೆ. ಕೆಂಡ ಕಾರದೆ ಇನ್ನೇನು ಮಾಡಿಯಾಳು? ತನ್ನ ಹಿರಿ ಮಗ ಜನಾರ್ಧನ ಸತ್ತು ಹೋಗಲು ಇವನೇ ಕಾರಣ ಎನ್ನುವುದು ಈಗ ಅವಳಿಗೂ ಗೊತ್ತಾಗಿ ಬಿಟ್ಟಿದೆ.

ಜನಾರ್ಧನ ತೀರಿ ಹೋಗಿ ಈಗಾಗಲೇ ವರ್ಷ ಕಳೆದಿದೆ. ಅವನನ್ನು ಬೂದಿ ಮಾಡುವ ದಿನ ಬಸೀರ ಪಠೇಲ ಬಂದಿದ್ದ. ಆಮೇಲೆ ಮತ್ತೆ ಈ ಕಡೆ ಮುಖ ಹಾಕಿದವನಲ್ಲ. ಈಗ ಆಕಸ್ಮಿಕವಾಗಿ ನಸುಕಿನಲ್ಲೇ ಬರಬೇಕಾದರೆ ಏನೋ ಬಲವಾದ ಕಾರಣ ಇರಬೇಕು. ಯಾರನ್ನೋ ಬಾವಿಗೆ ತಳ್ಳಿ ಆಳ ನೋಡುವ ಯೋಚನೆ ಇರಬೇಕು. ಯಾರನ್ನೋ ಏನು ಬಂತು? ನೋಡಿದರೆ ನನ್ನ ಮನೆ ಬಾಗಿಲಿಗೇ ಬರುತ್ತಿರುವ ಹಾಗೆ ಕಾಣುತ್ತಿದೆ. ಹೇಗೂ ನನ್ನ ಹಿರಿಮಗನನ್ನು ನುಂಗಿ ಆಗಿದೆಯಲ್ಲಾ? ಉಳಿದ ಇವನೊಬ್ಬನನ್ನು ಏಕೆ ಬಿಡಬೇಕು. ಅವನಿಗೂ ಈಗ ಮೀಸೆ ಚಿಗುರಲು ಪ್ರಾರಂಭವಾಗಿದೆ ಅಂತೆಲ್ಲಾ ಲೆಕ್ಕ ಹಾಕಿಕೊಂಡಿರಬೇಕು. ಬರಲಿ ಮತ್ತೆಂದೂ ಈ ಕಡೆ ತಲೆ ಹಾಕದಂತೆ ಈಸಲ ಸರಿಯಾಗಿಯೇ ಛೀಮಾರಿ ಹಾಕಿ ಕಳುಹಿಸಿದರಾಯಿತು.

ಯೋಚಿಸುತ್ತಿದ್ದಂತೆಯೇ ಸರ್ವೇಶ್ರಿಗೆ ಹಿಂದಿನ ಘಟನೆಗಳು ಒಂದೊಂದಾಗಿ ನೆನಪಾಗತೊಡಗಿದವು. ಮನಸ್ಸಿನಷ್ಟು ವೇಗವಾಗಿ ಓಡುವುದು ಇನ್ನೊಂದಿಲ್ಲವಂತೆ. ಸರ್ವೇಶ್ರಿಯೊಂದಿಗೆ ಹಾಗೆಯೇ ಆಯಿತು.

ಘಟ್ಟದ ಮೇಲೆ ಸೇರೆಗಾರಿಕೆ ಮಾಡಿಕೊಂಡಿದ್ದ ನನ್ನವರು ಹದಿಹರೆಯದ ಹುಡುಗಿಯೊಬ್ಬಳು ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಕಾರಣರಾದರು ಎಂಬ ಆಪಾದನೆಯೊಂದಿಗೆ ಹಿಂತಿರುಗಿ ಬಂದು ಊರು ಸೇರಿಕೊಳ್ಳುವ ತನಕ ನನಗೆ ಯಾವುದಕ್ಕೆ ಕಡಿಮೆ ಇತ್ತು? ಉಡಲು ಉಣ್ಣಲಿಕ್ಕಂತೂ ಎಂದೂ ಕೊರತೆಯಾದದ್ದಿಲ್ಲ. ಪಾಪಪ್ರಜ್ಞೆ ಅರಿವಿಗೆ ಬಂದೋ ಅಥವಾ ವಿನಾಕಾರಣ ಬಂದ ಅಪವಾದ ಸಹಿಸಿಕೊಳ್ಳಲಿಕ್ಕಾಗದೆಯೋ ಅಂತೂ ಹೆಂಡತಿಯಾದ ನನ್ನ ಹತ್ತಿರವೂ ಒಂದು ಮಾತು ಹೇಳದೆ ಬಂದ ವಾರದೊಳಗೇನೇ ಅವರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡದ್ದು ಈಗ ಬರೀ ಒಂದು ನೆನಪಾಗಿ ಉಳಿದಿದೆ ಅಷ್ಟೇ. ತಾನು ಸಾಯುವಾಗ ತಮ್ಮವರನ್ನೂ ಒಟ್ಟಿಗೆ ಸೆಳೆದುಕೊಂಡು ಹೋಗಬೇಕು ಅಂತ ಅವರು ಹಾಕಿದ ಪ್ಲಾನು ಮಾತ್ರ ಯಶಸ್ವಿಯಾಗಲಿಲ್ಲ.

ಆ ದಿನ ಸುಮಾರಾಗಿ ಕತ್ತಲಾಗಿತ್ತು. ಓಲಾಡುತ್ತಲೇ ಮನೆಗೆ ಬಂದವರು, 'ಕಳ್ಳು ತಂದಿದ್ದೇನೆ ಕುಡಿದು ಮಲಗಿ' ಅಂತ ಹೇಳಿದವರು ತಾವು ಇನ್ನಿಷ್ಟು ಸುರಿದುಕೊಂಡು ನಮಗಂತ ಎರಡು ಬಾಟ್ಲಿ ಪ್ರತ್ಯೇಕ ತೆಗೆದಿರಿಸಿ ಹಾಸಿಗೆ ಹಿಡಿದು ಮಲಗಿದವರು ಮತ್ತೆ ಹಾಸಿಗೆಯಿಂದ ಎದ್ದಿರಲಿಲ್ಲ. ಅದೇ ರಾತ್ರಿ ಶೇಷನ ಮನೆಗೆ ಸರ್ಪ ನುಗ್ಗಿ ಗಲಾಟೆಯಾಗಿಲ್ಲದಿದ್ದರೆ ನಾವು ಅವರನ್ನು ಬೆಳಗಿನ ತನಕ ಎಬ್ಬಿಸಲಿಕ್ಕೂ ಹೋಗುತ್ತಿರಲಿಲ್ಲ. ಕಳ್ಳಿನಲ್ಲಿ ವಿಷ ಬೆರೆತಿದೆ ಎನ್ನುವುದು ನಮಗೆ ಗೊತ್ತಾಗುತ್ತಲೂ ಇರಲಿಲ್ಲ. ಮಾತ್ರವಲ್ಲ, ಒಂದಲ್ಲ ಐದು ಹೆಣ ಆ ಹೊತ್ತು ನಮ್ಮ ಮನೆಯಲ್ಲಿ ಬೀಳುತ್ತಿತ್ತು. ಬಹುಶಃ ದೇವರಿಗೆ ಸರಿಕಾಣಲಿಲ್ಲ ಅಂತ ಕಾಣುತ್ತೆ. ಅವರೊಬ್ಬರೇ ನಮ್ಮನ್ನಗಲಿ ನಡೆದುಬಿಟ್ಟರು. ಕಳ್ಳಿನಲ್ಲಿ ವಿಷ ಬೆರೆತದ್ದರಿಂದ ಅವರು ಸಾವನ್ನಪ್ಪಿದ್ದು ನಿಜವಾದರೂ ಅವರಾಗಿಯೇ ಕಳ್ಳಿನಲ್ಲಿ ವಿಷ ಬೆರೆಸಿದ್ದರೋ ಆಕಸ್ಮಿಕವೋ ಅಥವಾ ಎರಡನೆಯವರ ಕೈವಾಡವಿತ್ತೋ ಎನ್ನುವುದು ಕೊನೆಗೂ ನಿಗೂಢವಾಗಿಯೇ ಉಳಿಯಿತು.

ಅವರು ತೀರಿಕೊಂಡಾಗ ರೆಪ್ಪೆಗೆ ರೆಪ್ಪೆ ತಾಗಿಸದಂತೆ ಕಳೆದ ಮೊದಲೊಂದು ವಾರ ಒಂದೈವತ್ತು ಬಾರಿಯಾದರೂ ನಾನು ಕೂಡಾ ಆತ್ಮಹತ್ಯೆಯ ನಿರ್ಧಾರ ತೆಗೆದುಕೊಂಡಿರಬೇಕು. ಅಂತಹ ಸಂದರ್ಭದಲ್ಲಿ ಸ್ವಲ್ಪವಾದರೂ ಧೈರ್ಯಕೊಟ್ಟು ಬದುಕುಳಿಯುವ ದಾರಿ ತೋರಿಸುವುದಾಗಿ ಭರವಸೆ ಕೊಟ್ಟವನೆಂದರೆ ಇದೇ ಬಸೀರ ಪಠೇಲ. ಆ ನಿಟ್ಟಿನಲ್ಲಿ ಯೋಚಿಸುವಾಗ ನಾನು ಬಸೀರನಿಗೆ ಚಿರಋಣಿ. ಊರಿನವರು ಆತನ ಬಗ್ಗೆ ಏನೇ ಹೇಳಲಿ. ಊರಿನವರಿಗಿಂತ ಇವನು ಎಷ್ಟಕ್ಕೂ ಆಗಬೇಕು.

ಬಸೀರ ಪಠೇಲ ಒಬ್ಬನಲ್ಲದಿದ್ದರೆ ನಾವು ಇಷ್ಟು ಹೊತ್ತಿಗೆ ಬೀದಿ ಭಿಕಾರಿಗಳಾಗಬೇಕಾಗುತ್ತಿತ್ತೋ ಏನೋ? ಒಡೆಯರ ಮನೆಗೆ ನಾನು ಬಿಟ್ಟಿ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದಲ್ಲಿ ನಮಗೆ ಮನೆ ಖಾಲಿ ಮಾಡಿ ಬೇರೆಲ್ಲಿಗಾದರೂ ಹೋಗಬೇಕಾಗುತ್ತಿತ್ತು. ದಿನದ ಹತ್ತು ಹನ್ನೆರಡು ತಾಸು ಅವರ ಮನೆಯಂಗಳದಲ್ಲಿ ಸುರಿಸುವ ಬೆವರಿನ ರೂಪದಲ್ಲಿ ಅವರು ಮನೆ ಬಾಡಿಗೆ ವಸೂಲಿ ಮಾಡುತ್ತಿದ್ದರು.

✍ ಜಿ.ವಿ. ಕಂಚುಗಾರ

ಮಗ ಜನಾರ್ಧನ ಕೂಡಾ ಒಡೆಯರ ಮನೆ ಕೆಲಸಕ್ಕೆ ಹೋಗುತ್ತಿದ್ದನಾದರೂ ಅವನಿಗೆ ಸಿಗುತ್ತಿದ್ದುದು ದಿನಕ್ಕೆ ಎರಡು ಸೇರು ಅಕ್ಕಿ, ಐವತ್ತು ರೂಪಾಯಿ. ಅದರೊಂದಿಗೆ ಬೆಳಗಿನ ಖಾಲಿ ಕಾಫಿ ಹಾಗೂ ಮಧ್ಯಾಹ್ನದ ಊಟ. ಘಟ್ಟದ ಮೇಲಿಂದ ಅವರು ಆಗಾಗ ಅಷ್ಟಿಷ್ಟು ಕಳುಹಿಸುತ್ತಿದ್ದುದರಿಂದ ಯಾವುದಕ್ಕೂ ಕುಂದು ಕೊರತೆಯಾಗದೆ ನಮ್ಮ ಜೀವನವೇನೋ ನೆಮ್ಮದಿಯಾಗಿಯೇ ನಡೆಯುತ್ತಿತ್ತು. ಅವರು ತೀರಿಕೊಂಡದ್ದೇ ಮೂಲ. ನಮ್ಮ ಆರ್ಥಿಕ ಪರಿಸ್ಥಿತಿ ಬಹಳಷ್ಟು ಹದಗೆಟ್ಟು ಸುವಾಸಿನಿ ಹಾಗೂ ಧನಂಜಯರ ಓದಿಗೂ ಇತಿಶ್ರೀ ಹಾಡಬೇಕಾಯಿತು.

ಎಷ್ಟಾದರೂ ಮನುಷ್ಯನಿಗೆ ಆಸೆ ಎನ್ನುವುದು ಹೆಚ್ಚಲ್ಲವೇ? ಮುಲ್ಲಿಗದ್ದೆ ಶಂಕರ ಇದೇ ಬಸೀರ ಪಠೇಲನೊಟ್ಟಿಗೆ ಮುಂಬಯಿಗೆ ಹೋಗಿ ಎರಡೇ ವರ್ಷದಲ್ಲಿ ಇಪ್ಪತ್ತು ಸಾವಿರ ಒಟ್ಟು ಮಾಡಿಕೊಂಡು ಬಂದು ಊರಿನಲ್ಲಿ ಒಂದು ಕಿರಾಣಿ ಅಂಗಡಿ ಹಾಕಿಕೊಂಡು ಒಂದು ಸ್ಥಿತಿಗೆ ಬಂದದ್ದನ್ನು ನೋಡಿದ ಜನಾರ್ಧನನಿಗೆ ತಾನು ಒಡೆಯರ ಮನೆಯಲ್ಲಿ ಈ ರೀತಿ ಕೊಳೆಯುತ್ತಾ ಬಿದ್ದಿರುವುದು ಸರಿಯಲ್ಲ ಅನ್ನಿಸಿರಬೇಕು. ಒಂದು ದಿನ ಬಸೀರ ಪಠೇಲನನ್ನು ನೋಡಿ ಮಾತನಾಡಿಯೂ ಬಂದ. ಜನಾರ್ಧನ ದೇಹದಲ್ಲಿ ಗಟ್ಟಿ ಮುಟ್ಟಾಗಿದ್ದುದರಿಂದ ಬಸೀರ ಪಠೇಲನಿಗೆ ಇವನ ಮೇಲೆ ಮೊದಲೇ ಒಂದು ಕಣ್ಣು ಇತ್ತು. ಈಗಂತೂ ಇನ್ನೂ ಸಲೀಸಾಯಿತು. ಜನಾರ್ಧನನನ್ನು ಮುಂಬಯಿಗೆ ಕರೆದುಕೊಂಡು ಹೋಗುವುದಂತ ಗಟ್ಟಿಯಾಯಿತು. ದಿನಗೂಲಿಯಾದರೆ ದಿನಗೂಲಿ, ದಿನಕ್ಕೆ ನೂರಿನ್ನೂರು ರೂಪಾಯಿ ಎಂದರೆ ಯಾರು ಬೇಡ ಅಂದಾರು?

ಆದರೆ ಜನಾರ್ಧನನ ಅದೃಷ್ಟ ಮಾತ್ರ ಚೆನ್ನಾಗಿರಲಿಲ್ಲ. ಹೋಗಿ ವರ್ಷ

ಕಳೆಯುವುದರೊಳಗೆ ಊರಿಗೆ ಹಿಂತಿರುಗುವಂತಾಯಿತು. ಮೊದ ಮೊದಲು ತಿನ್ನಲಿಕ್ಕೆ ಕಷ್ಟಪಡುತ್ತಿದ್ದವ ಕೊನೆ ಕೊನೆಗೆ ನೀರು ಕುಡಿಯಲಿಕ್ಕೂ ಒದ್ದಾಡತೊಡಗಿದ. ಏನೋ ಕಾಯಿಲೆ ಇರಬೇಕು ಅಂತ ಸ್ಪೆಷಲಿಸ್ಟ್ ಡಾಕ್ಟರರಿಗೆ ತೋರಿಸಲಾಗಿ ಅವರು ಟಾಟಾ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚೆಕ್‌ಅಪ್ ಮಾಡಿಕೊಳ್ಳುವುದು ಒಳ್ಳೆಯದು ಅಂತ ಗೈಡೆನ್ಸ್ ಮಾಡಿದರು. ಜನಾರ್ಧನನಿಗೆ ಗಂಟಲು ಕ್ಯಾನ್ಸರ್ ಅನ್ನುವುದು ಪತ್ತೆಯಾಗಿ ದೇಹಕ್ಕೆ ಶಕ್ತಿ ಬರಲಿ ಅಂತ ಕೊಟ್ಟ ಆರು ಬಾಟಲಿ ರಕ್ತ ಹಾಗೂ ಶಾಕ್ ಟ್ರೀಟ್‌ಮೆಂಟ್ ಎಲ್ಲಾ ವ್ಯರ್ಥವಾದವು. ಇವನಿನ್ನು ಬದುಕುವುದಿಲ್ಲ ಅಂತ ಗಟ್ಟಿಯಾದಾಗಲೇ ನೀನೊಮ್ಮೆ ಊರಿಗೆ ಹೋಗಿ ಬಾ ಎಲ್ಲಾ ಸರಿಯಾಗುತ್ತದೆ ಅಂತ. ಬಸೀರ ಪಠೇಲ ಭರವಸೆಯ ಮಾತನ್ನಾಡಿ ಜನಾರ್ಧನನನ್ನು ಊರಿಗೆ ಕಳುಹಿಸಿಕೊಟ್ಟದ್ದು.

ಗಾವುಟಿ ವೈದ್ಯರೊಬ್ಬರು ಜನಾರ್ಧನನಿಗೆ ಔಷಧ ಮಾಡಲು ಮುಂದೆ ಬಂದರೂ ಅವರ ದುಬಾರಿ ಬೆಲೆಯ ಔಷಧಿ ಕೊಂಡುಕೊಳ್ಳುವಷ್ಟು ತಾಕತ್ತು ಸರ್ವೇಶ್ರಿಯಲ್ಲಿರಲಿಲ್ಲ. ಊರಿಗೆ ಬಂದ ತಿಂಗಳೊಳಗೇನೇ ಜನಾರ್ಧನ ಅಸುನೀಗಿದ.

ಜನಾರ್ಧನನ ಅಕಾಲ ಮರಣದಿಂದ ತತ್ತರಿಸಿ ಹೋದ ಸರ್ವೇಶ್ರಿಗೆ ಅಂತಹ ವಿಷಮ ಪರಿಸ್ಥಿತಿಯಲ್ಲೂ ನಾಲ್ಕು ಸಾಂತ್ವನದ ಮಾತಾಡಿದ್ದೆಂದರೆ ಬಸೀರ ಪಠೇಲ. ಒಬ್ಬಳೇ ಸಂಕೋಚ ಪಟ್ಟುಕೊಳ್ಳಬೇಡ. ಏನಾದರೂ ಅಗತ್ಯವಿದ್ದಲ್ಲಿ ಹಿಂಜರಿಯದೇ ಕೇಳು- ನನ್ನ ಮನೆ ಬಾಗಿಲು ನಿನಗೆ ಸದಾ ತೆರೆದಿದೆ ಅಂತ ಸರ್ವೇಶ್ರಿಯ ಮೈದಡವಿ ಬಸೀರ ಪಠೇಲ ಅಲ್ಲಿಂದ ಕಾಲು ಕಿತ್ತಾಗ ಯಾರೂ ಏನೊಂದೂ ಚಕಾರವೆತ್ತದಿದ್ದರೂ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಕಲ್ಪಿಸಿಕೊಂಡಿದ್ದಾರೆ ಅಂತ ಅವರ ಮುಖಭಾವದಿಂದ ಎಂತವರಿಗೂ ಅರ್ಥವಾಗುತ್ತಿತ್ತು.

ಮುಂಬಯಿಯಲ್ಲಿ ಏನೋ ಏಜೆನ್ಸಿ ತೆಗೆದುಕೊಂಡು ಊರಿನ ಕಡೆಯ ಹುಡುಗರು ಮಕ್ಕಳನ್ನೆಲ್ಲಾ ಲೇಬರ್ ಆಗಿ ಸಾಗಹಾಕಿ ಸಾಕಷ್ಟು ಹಣ ಮಾಡಿಕೊಂಡಿದ್ದಾನೆ ಬಸೀರ ಪಠೇಲ ಅನ್ನುವುದು ಸರ್ವೇಶ್ರಿಯನ್ನೂ ಸೇರಿಸಿ ಈಗೀಗ ಎಲ್ಲರಿಗೂ ಗೊತ್ತಾಗಿಬಿಟ್ಟಿದೆ. ಅವನೊಟ್ಟಿಗೆ ಮುಂಬಯಿಗೆ ಹೋದ ಕೆಲವರು ಅಷ್ಟಿಷ್ಟು ದುಡ್ಡು ಮಾಡಿಕೊಂಡು ಕೆಲವೇ ವರ್ಷಗಳಲ್ಲಿ ಊರಿಗೆ ಹಿಂತಿರುಗಿ ಬಂದು ಏನೇನೋ ಎಲ್ಲಾ ಬಿಸಿನೆಸ್ಸಿಗೆ ಕೈ ಹಾಕಿ ಮುಂದೆ ಬಂದಿದ್ದಾರೆ. ಮತ್ತೆ ಕೆಲವರು ಜೀವಂತವಾಗಿ ಇದ್ದಾರೋ ಇಲ್ಲವೋ ಅಂತ ಸಂಶಯ ಪಡುವಷ್ಟು ಊರಿನ ಸಂಬಂಧ ಕಡಿದುಕೊಂಡಿದ್ದಾರೆ. ಉಳಿದವರು ಸ್ಮಗ್ಲಿಂಗ್, ಗುಂಡಾಗಿರಿ, ಯೂನಿಯನ್ ಮಣ್ಣು ಮಸಣ ಅಂತ ಸಾಮಾನ್ಯ ಜೀವನದಿಂದ ದೂರಸಾಗಿ ಕೋರ್ಟು ಕಚೇರಿ, ಮನೆ ಜೈಲು ಅಂತ ಅಲೆಯಕ್ಕೆ ಪ್ರಾರಂಭಿಸಿದ್ದಾರೆ.....

ಅಂಗಳಕ್ಕೆ ಬಂದು ಚಪ್ಪಲಿ ಕಳಚುತ್ತಾ 'ಸರ್ವೇಶ್ರಿ' ಅಂತ ಬಸೀರ ಪಠೇಲ ಗಟ್ಟಿಯಾಗಿ ಕರೆದಾಗಲೇ ಅವಳು ತನ್ನ ಕಲ್ಪನಾ ಲೋಕದಿಂದ ವಾಸ್ತವಕ್ಕೆ ಬಂದದ್ದು. ತನ್ನನ್ನು ಎವೆಯಿಕ್ಕದೇ ನೋಡುತ್ತಿದ್ದ ಬಸೀರ ಪಠೇಲನ ಕಣ್ಣಲ್ಲಿ ಕಣ್ಣಿಟ್ಟು ಸರ್ವೇಶ್ರಿ, ಅವನನ್ನು ದಿಟ್ಟಿಸಿ ನೋಡಿದಳು. ಎರಡು ನಿಮಿಷ ಯಾರ ಬಾಯಿಯಿಂದಲೂ ಮಾತು ಹೊರಡಲಿಲ್ಲ. ಬದಲಾಗಿ ಬಸೀರ ಪಠೇಲ ಕಣ್ಣಿನಿಂದ ಕಣ್ಣೀರು ಹರಿಯಲು ಪ್ರಾರಂಭವಾಗಿ,

'ಸರ್ವೇಶ್ರಿ, ನನ್ನನ್ನು ಕ್ಷಮಿಸಮ್ಮ. ನಾನು ಪಾಪಿ. ನಿನ್ನಂತಹ ಮುಗ್ಧಳಿಗೆ ದ್ರೋಹ ಬಗೆದ ನನಗೆ ದೇವರೇ ಸರಿಯಾದ ಶಿಕ್ಷೆ ವಿಧಿಸಿದ್ದಾರೆ. ಅಂತ ಗೋಳೋ ಎಂದು ಅಳಲಿಕ್ಕೆ ಪ್ರಾರಂಭಿಸಿ ಸರ್ವೇಶ್ರಿಯ ಕಾಲ ಬುಡಕ್ಕೆ ಬಂದು ಕುಸಿದು ಬಿದ್ದ.

ಸರ್ವೇಶ್ರಿಗೆ ತಲೆ ಬುಡ ಒಂದೂ ಅರ್ಥವಾಗಲಿಲ್ಲ. ಒಂದು ಹೆಜ್ಜೆ ಹಿಂದೆ ಸರಿಯುತ್ತಾ ಸಂಶಯ ದೃಷ್ಟಿಯಿಂದ ಅವನನ್ನೇ ನೋಡತೊಡಗಿದಳು. ಅವಳ ಇಂಗಿತವನ್ನರಿತ ಬಸೀರ ಪಠೇಲ ನಿಧಾನವಾಗಿ ಎದ್ದು ಏರುಜಗುಲಿಯ ಮೇಲಿದ್ದ ಏಕೈಕ ಮುರುಕು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾ ಪುನಃ ಮಾತಿಗಾರಂಭಿಸಿದ.

ಸರ್ವೇಶ್ರಿ, ನೀನು ನನ್ನನ್ನು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಂಡಿದ್ದೀಯೋ ಗೊತ್ತಿಲ್ಲ. ನಾನು ಕೂಡಾ ನಿನ್ನನ್ನು ತಿಳಿದುಕೊಂಡದ್ದು ಬಹಳ ತಡವಾಗಿ. ನಿನ್ನಂತಹ ಸಾಧ್ವಿಗೆ ಈ ಪರಿಸ್ಥಿತಿ ಬರಬಾರದಿತ್ತು. ಬಂತು. ಅದಕ್ಕೆ ಬಹುಪಾಲು ನಾನೂ ಕಾರಣನಾಗಿದ್ದೇನೆ. ನಿನ್ನ ಹಿರಿ ಮಗ ಜನಾರ್ಧನ ಸತ್ತದ್ದು ನನ್ನಿಂದಾಗಿ. ನನ್ನ ಮಗ ಯೂಸುಫ್ ಪಠೇಲ ಮುಂಬಯಿಯಲ್ಲಿ ಒಂದು ಏಜೆನ್ಸಿ ನಡೆಸುತ್ತಿದ್ದು ದೊಡ್ಡ ದೊಡ್ಡ ಕಂಪೆನಿಗಳಿಗೆ ದಿನಗೂಲಿಗಳು ಬೇಕಾದಲ್ಲಿ ಡೈಲಿ ವೇಜಸಿನ ಮೇಲೆ ಕಮಿಷನ್ ಬೇಸಿಸನಲ್ಲಿ ಸಪ್ಲಾ ಮಾಡುತ್ತಿದ್ದ. ಅವನಿಗೆ ಬೇಕಾಗುವ ಕೂಲಿಯಾಳುಗಳನ್ನು ಊರುಕೇರಿಗಳಿಂದ ತರಿಸಿ ಹೊಂದಿಸುವ ಕಾರ್ಯ ನಾನು ನೋಡಿಕೊಳ್ಳುತ್ತಿದ್ದೆ. ನಾನೂ ನನ್ನ ಮಗನೂ ಒಟ್ಟಾಗಿ ನಿನ್ನ ಮಗ ಜನಾರ್ಧನನನ್ನು ಕೆಲಸಕ್ಕೆ ಸೇರಿಸಿದ್ದು Automic Research Centre ನಲ್ಲಿ; ಡೈಲಿ ವೇಜಸನ ಮೇಲೆ ಅದೂ ಹೆಲ್ಪರ್ ಆಗಿ. ಅಲ್ಲೇ ನಿನ್ನ ಮಗ ಅಣುವಿಕಿರಣದ ದುಷ್ಪರಿಣಾಮಕ್ಕೊಳಗಾಗಿ ಕ್ಯಾನ್ಸರ್‌ಗೆ ತುತ್ತಾದದ್ದು. ಈಗ ನನ್ನ ಮಗನಿಗೂ ಅದೇ ಕಾಯಿಲೆ ಹಿಡಿದುಕೊಂಡಿದೆ.

ಸಾವು ಬದುಕಿನ ಅಂಚಿನಲ್ಲಿ ಸೆಣಸಾಡುತ್ತಾ ಹಾಸಿಗೆ ಹಿಡಿದು ತಿಂಗಳು ಕಳೆಯಿತು. ನನಗೆ ಇರುವುದು ಒಬ್ಬನೇ ಮಗ. ಮಗಳು ಮಗ ಎಲ್ಲಾ ಅವನೇ. ಅವನೇ ನನ್ನ ಸರ್ವಸ್ವ. ಯುರೇನಿಯಂ ಅದುರು ತೆಗೆಯುವ ಮೈನಿಗೂ Automic centreಗೂ ದಿನಗೂಲಿಗಳನ್ನು ಸೇರಿಸಲು ಆಗಾಗ ಸಂದರ್ಶಿಸುತ್ತಿದ್ದುದೇ ಅವನಿಗೆ ಮೂಲವಾಯಿತು. ಕ್ಯಾನ್ಸರ್ ಹಿಡಿದುಕೊಂಡಿತು. ಕಾಯಿಲೆ ಹಿಡಿದು ವರ್ಷವೇ ಕಳೆದು ಹೋಗಿದೆಯಂತೆ. ಗೊತ್ತಾದದ್ದು ತಿಂಗಳ ಹಿಂದೆ. ವಿಷಾನಿಲ ಸೋರುವುದು, ವಿಕಿರಣಗೊಳ್ಳುವುದು ದೇಹದ ಮೇಲೆ ಯಾವ ರೀತಿ ತೀವ್ರತರ ಪರಿಣಾಮ ಬೀರುತ್ತವೆ ಅಂತ ತಿಳಿದೂ ತಿಳಿದೂ ಯಾರ ಯಾರದ್ದೋ ಮಕ್ಕಳನ್ನೆಲ್ಲಾ ಬಲಿಕೊಟ್ಟದ್ದಕ್ಕೆ ತಕ್ಕ ಪ್ರಾಯಶ್ಚಿತ್ತ ಅನುಭವಿಸಬೇಕಾದ ದುರ್ಭಾಗ್ಯ ನನ್ನದಾಯಿತು. ತಾರಾಪುರ ಅಣುಶಕ್ತಿ ಕೇಂದ್ರದಲ್ಲಿ ರೇಡಿಯೋ ವಿಕಿರಣಕ್ಕೆ ತುತ್ತಾಗುತ್ತಿರುವ ಕಾರ್ಮಿಕರ ಸಂಖ್ಯೆ ವರ್ಷ ವರ್ಷ ಏರುತ್ತಿರುವುದಾಗಲೀ ಭೋಪಾಳದ ಯೂನಿಯನ್ ಕಾರ್ಬೈಡ್‌ನಲ್ಲಿ ವಿಷಾನಿಲ ಸೋರುವಿಕೆಯಿಂದ ಸತ್ತವರ ಹಾಗೂ ಬದುಕಿಯೂ ಸತ್ತಂತಿರುವವರ ನರಕಯಾತನೆಯಾಗಲಿ ಇನ್ನೂ ಸರಕಾರದ ಕಣ್ಣು ತೆರೆಯಿಸದಿದ್ದುದು ನಮ್ಮ ದುರದೃಷ್ಟವಲ್ಲದೆ ಮತ್ತೇನು? ಇಂತಹ ಕಂಪನಿಗಳಲ್ಲಿ ನೌಕರರಿಗೆ ಸಿಗಬೇಕಾದ ಸಹಾಯ ಸೌಲತ್ತುಗಳು, ವೇತನ ಭತ್ತೆಗಳು ಸರಿಯಾಗಿ ಸಿಗದೆ ಅವರು ಪಡುವ ಪಾಡು ಹೇಳಿ ಪೂರೈಸುವುದಲ್ಲ. ವಿಷಾನಿಲ ಸೋರುವಿಕೆ, ವಿಕಿರಣಗಳ ಮೇಲೆ ಯೋಗ್ಯ ಹತೋಟಿ ತಾರದೆ ಯಾರೂ ಕೆಲಸ ಮಾಡುವುದು ತರವಲ್ಲ ಎನ್ನುವುದು ನಿಜವಾದರೂ ಹೊಟ್ಟೆ ಪಾಡಿಗಾಗಿ ದಿನೇ ದಿನೇ ಡೈಲಿ ವೇಜಸನ ಮೇಲೆ ಕೂಲಿಯಾಳುಗಳು ಬಂದು ಸೇರುತ್ತಿರುವುದು ಏರುತ್ತಲೇ ಹೋಗುತ್ತಿದೆ. ಕಣ್ಣಿನಲ್ಲಿ ರಕ್ತವಿಲ್ಲದ ನನ್ನಂತಹ ಕೆಲವರು; ಕೂಲಿಯಾಳುಗಳು ಹಾಗೂ ಕಂಪೆನಿಗಳ ನಡುವೆ ದಲ್ಲಾಳಿಗಳಂತೆ ಕೆಲಸ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುವುದು ನಿಜಕ್ಕೂ ನಾಚಿಕೆಗೇಡು. ಅಂತಾರಾಷ್ಟ್ರೀಯ ಯುವ ವರ್ಷಕ್ಕೆ ಇದೇ ನಾವು ಕೊಟ್ಟ ಕೊಡುಗೆ. ಮಾನವೀಯತೆಗೇ ನಾವೆಸಗಿದ ಬಹುದೊಡ್ಡ ಅಪಚಾರ. ಥೀ; ನಮ್ಮ ಬದುಕಿಗೆ ಧಿಕ್ಕಾರ. ನಾನು ನನ್ನ ಮಗನೂ ಸೇರಿ ಈ ರೀತಿಯಾಗಿ ಬಹಳಷ್ಟು ಹಣ ಸಂಪಾದಿಸಿದ್ದೇವೆ. ಆದರೇನು ಬಂತು. ಈಗ ಅದೆಲ್ಲಾ ವ್ಯರ್ಥವಾಗಿ ಕಾಣುತ್ತಿದೆ. ಸರ್ವೇಶ್ರಿ, ಇಷ್ಟು ದಿನ ನನ್ನಲ್ಲಿ ಏನನ್ನೂ ಸಾಧಿಸಬಲ್ಲೆ ಎಂಬ ಒಂದು ರೀತಿಯ ಛಲ ಇತ್ತು. ಈಗ ಅದೆಲ್ಲಾ ನುಚ್ಚು ನೂರಾಗಿ ಹೋಗಿದೆ. ನನಗೆ ನನ್ನ ಮೇಲೇ ವಿಶ್ವಾಸ ಉಳಿದಿಲ್ಲ. ನನ್ನ ಪಾಪದ ಕೊಡ ತುಂಬಿದ ಹಾಗೆ ಕಾಣುತ್ತಿದೆ. ಆದರೂ ಒಂದೇ ಒಂದು ಆಶಾಕಿರಣದಿಂದ ನಿನ್ನ ಬಳಿ ಬಂದಿದ್ದೇನೆ. ನಿನ್ನಲ್ಲಿ ಅದ್ಯಾವುದೋ ಒಂದು ದೈವೀ ಶಕ್ತಿಯನ್ನು ನಾನು ಕಂಡುಕೊಂಡಿದ್ದೇನೆ. ನಿನ್ನ ಗಂಡ ಮುಕುಂದ ನಾಯ್ಕರು ಸತ್ತಾಗಾಗಲಿ ಹಿರಿಮಗ ಜನಾರ್ಧನ ಸತ್ತಾಗಾಗಲಿ ನೀನು ಏನೊಂದೂ ವಿಚಲಿತಳಾಗದೆ ಅಧಮ್ಯಧೈರ್ಯ ಸಾಹಸಗಳಿಂದ ಪರಿಸ್ಥಿತಿಯನ್ನು ಎದುರಿಸಿದ್ದು ನನಗಿನ್ನೂ ಸರಿಯಾಗಿ ನೆನಪಿದೆ. ದೊಡ್ಡ ಮನಸ್ಸು ಮಾಡಿ ನೀನು ನನ್ನನ್ನು ನನ್ನ

ಮಗನನ್ನೂ ಕ್ಷಮಿಸಿದಿಯಂತಾದರೆ ನನ್ನ ಮಗ ಬದುಕುಳಿಯುತ್ತಾನೆ ಎಂಬ ಭರವಸೆ ನನಗಿದೆ. ನನ್ನ ಅಂತರಾತ್ಮ ಹಾಗೆ ಕೂಗಿಕೊಳ್ಳುತ್ತಿದೆ. ಕೈ ಜೋಡಿಸಿ ಬೇಡಿಕೊಳ್ಳುತ್ತಿದ್ದೇನೆ. ನನ್ನ ಮಗ ಯೂಸುಫ ಪಠೇಲ ನಿನ್ನ ಮಗ ಜನಾರ್ಧನ ಅಂತಲೇ ತಿಳಿದು ಅವನನ್ನೊಮ್ಮೆ ಕ್ಷಮಿಸಿಬಿಡು ತಾಯಿ. ಇದಕ್ಕಿಂತ ಹೆಚ್ಚಿಗೆ ಇನ್ನೇನೂ ಹೇಳಲಾರೆ.

ಇಷ್ಟು ಮಾತು ಹೇಳಿ ಬಸೀರ ಪಠೇಲ ನಿಧಾನವಾಗಿ ಕಣ್ಣೆತ್ತಿ ನೋಡಿದ. ಸರ್ವೇಶ್ರಿಯ ಕಣ್ಣುಗಳು ತೇವವಾಗುತ್ತಿರುವುದನ್ನು ಕಂಡವ ಇನ್ನು ಹೆಚ್ಚು ಹೊತ್ತು ಅಲ್ಲಿ ನಿಲ್ಲಬಯಸದೆ, 'ಸರ್ವೇಶ್ರಿ, ನಾನಿನ್ನು ಬರ್ತಿನಮ್ಮ' ಅನ್ನುತ್ತಾ ಅಲ್ಲಿಂದ ಕಾಲ್ಕಿತ್ತ.

ಕಣ್ಣೀರು ಹತೋಟಿ ತಪ್ಪಿ ಹರಿಯತೊಡಗಿದರೂ ಬಸೀರಪಠೇಲ ಹೊರಡಲನುವಾದುದನ್ನು ಮನಗಂಡ ಸರ್ವೇಶ್ರಿ, ಅವನನ್ನು ತಡೆದು ನಿಲ್ಲಿಸಿ ಎರಡು ಮಾತನ್ನಾಡಲು ಮರೆಯಲಿಲ್ಲ. ಜನಾರ್ಧನ ಸಾಯುವ ಕೆಲವು ಕ್ಷಣ ಮೊದಲು ಕಾರ್ಮಿಕರ ಸಮಸ್ಯೆಗಳ ಬಗ್ಗೆ ತನ್ನ ಅಳಲನ್ನು ತೋಡಿಕೊಂಡದ್ದು ಅವಳಿಗೆ ಒಂದೊಂದಾಗಿ ನೆನಪಾಗತೊಡಗಿತ್ತು.

ಬಸೀರ, ನನಗೆ ನಿನ್ನ ಮೇಲೆ ಎಳ್ಳಷ್ಟೂ ದ್ವೇಷವಿಲ್ಲ. ನಿನ್ನ ಉಪಕಾರವೇ ಬಹಳಷ್ಟಿರುವಾಗ ನಿನ್ನನ್ನು ದ್ವೇಷಿಸುವ ಮಾತೇ ಬರುವುದಿಲ್ಲ. ನನ್ನ ಮಗನಿಗೆ ಕ್ಯಾನ್ಸರ್ ಹಿಡಿಯಲು ನೀನೇ ಕಾರಣ ಎನ್ನುವುದು ಒಂದು ರೀತಿಯಲ್ಲಿ ನಿಜವಾದರೂ ನಿನ್ನಿಂದಾಗಿ ಮುಂದೆ ಬಂದ ಬಹಳಷ್ಟು ಯುವಕರನ್ನು ನಾನು ನಿತ್ಯ ನೋಡುತ್ತಿಲ್ಲವೇ? ಮುಖ್ಯವಾಗಿ ನನ್ನ ಹಣೆ ಬರಹ ಸರಿ ಇರಲಿಲ್ಲ. ಅದಕ್ಕೆ ನಿನ್ನನ್ನು ದೂರಿ ಪ್ರಯೋಜನವೇನು? ಆದರೂ ನನ್ನಿಂದಾಗಿಯೇ ಇಷ್ಟೆಲ್ಲಾ ಆಯಿತು ಅಂತ ನೀನು ಪಶ್ಚಾತ್ತಾಪ ಪಡುತ್ತಿರುವಿಯಲ್ಲಾ? ಪಶ್ಚಾತ್ತಾಪಕ್ಕಿಂತ ಮಿಗಿಲಾದ ಪ್ರಾಯಶ್ಚಿತ್ತ ಇನ್ನೊಂದಿಲ್ಲ ಅಂತ ಹಿರಿಯರು ಹೇಳುವುದನ್ನು ನೀನು ಕೇಳಿಲ್ಲವೇ? ಆದರೂ ಅದಕ್ಕೂ ಮಿಗಿಲಾಗಿ ನೀನು ಮಾಡಬೇಕಾದ ಕಾರ್ಯ ಇನ್ನೊಂದಿದೆ. ನನ್ನ ಮಗನನ್ನು ತಳ್ಳಿದಂತೆ ನೀನು ಇನ್ನು ಯಾರು ಯಾರನ್ನೆಲ್ಲಾ ಈ ರೀತಿಯ ನರಕದ ಗುಂಡಿಗೆ ದೂಡಿರುವಿಯೋ ಯಾರಿಗೆ ಗೊತ್ತು? ಅವರನ್ನೆಲ್ಲಾ ಸಂದರ್ಶಿಸಿ ಅವರ ಕ್ಷೇಮ ಸಮಾಚಾರ ವಿಚಾರಿಸಿಕೊಳ್ಳಬೇಕಾದ ಮಹತ್ಕಾರ್ಯ ಈಗ ನಿನ್ನಿಂದಾಗಬೇಕಿದೆ. ಕಾರ್ಮಿಕರ ಏಳಿಗೆಗಾಗಿ ಅವರ ಉನ್ನತಿಗಾಗಿ ನೀನು ನಿನ್ನನ್ನೇ ಸಮರ್ಪಿಸಿಕೊಂಡು ಹೋರಾಡಬೇಕಾದ ಕಾಲ ಬಂದಿದೆ. ದೇವರು ನಿನಗೆ ಆ ರೀತಿಯ ಬುದ್ಧಿಯನ್ನಿತ್ತು ಸನ್ಮಾರ್ಗದಲ್ಲಿ ಸಾಗಿಸಲಿ ಅಂತ ಪ್ರಾರ್ಥಿಸಿಕೊಳ್ಳುತ್ತಾ ತುಂಬು ಹೃದಯದಿಂದ ನಿಮ್ಮಿಬ್ಬರನ್ನೂ ಕ್ಷಮಿಸುತ್ತಿದ್ದೇನೆ. ನಿನ್ನ ನಂಬಿಕೆಯ ಮೇಲೆ ನಿನಗೆ ಭರವಸೆಯಿದ್ದ ಮೇಲೆ ನಾನು ಎರಡು ಮಾತು ಹೇಳುವಂತಿಲ್ಲ. ಹೋಗಿ ಬಾ. ಮುಂದಿನ ಸಲ ಬರುವಾಗ ಮಗನನ್ನೂ ಕೂಡಿಕೊಂಡು ಬಾ.

ಸರ್ವೇಶ್ರಿಯ ನಿಷ್ಕಳಂಕ ಮನಸ್ಸಿನ ಬಿರುಮಾತುಗಳಿಂದ ಭಾವೋದ್ವೇಗಕ್ಕೊಳಗಾದ ಬಸೀರ ಪಠೇಲ ನಿಧಾನವಾಗಿ ತನ್ನ ಕಾಲುಗಳಿಗೆ ಚಲನೆಯಿತ್ತ.

ಬಸೀರ ಪಠೇಲ ಹೋದ ಕಡೆಯೇ ನೋಡುತ್ತಿದ್ದ ಸರ್ವೇಶ್ರಿ ಅವನು ಅಗಳು ದಾಟಿ ಉಬ್ಬು ಹತ್ತಿ ಕಣ್ಮರೆಯಾಗುವ ತನಕವೂ ದೃಷ್ಟಿ ಬದಲಿಸಲಿಲ್ಲ. ಅವನ ಬಗ್ಗೆ ನಾನು ಎಷ್ಟೊಂದು ತಪ್ಪು ಕಲ್ಪನೆ ಮಾಡಿಕೊಂಡಿದ್ದೆ ಅಂತ ಮನಸ್ಸಿನಲ್ಲೇ ಮೆಲುಕು ಹಾಕತೊಡಗಿದಂತೆ ಅವಳಿಗರಿವಿಲ್ಲದಂತೆ ಎರಡು ಹನಿ ಕಣ್ಣೀರು ಕೆಳಗುದುರಿದವು.

ತಾನು ನಂಬಿದ ಆನೆಗುಡ್ಡೆ ಗಣಪತಿ ಹೆಸರಿನಲ್ಲಿ ಒಂದು ಕಾಲು ರೂಪಾಯಿ ತೆಗೆದಿರಿಸಿ ಮಂಡೆ ಹಾಳೆ ಸರಿಪಡಿಸಿಕೊಳ್ಳುತ್ತಾ ಒಡೆಯರ ಮನೆಯತ್ತ ಸಾಗಿದವಳು, 'ನಾಳೆಗೆ ಸಂಕ್ರಾಂತಿ. ಆನೆಗುಡ್ಡೆಗೆ ಹೋಗಿ ಯುಸೂಫ ಪಠೇಲನ ಹೆಸರಿನಲ್ಲಿ ಹಣ್ಣುಕಾಯಿ ಮಾಡಿಕೊಂಡು ಬರಬೇಕು. ಇವತ್ತು ಕೆಲಸಕ್ಕೆ ಹೋದವಳು ನಾಳೆ ಬರಲಿಕ್ಕಾಗುವುದಿಲ್ಲ. ಅಂತ ಒಡೆಯರ ಮನೆಯಲ್ಲಿ ಹೇಳಿ ಬಂದರಾಯಿತು' ಅಂತ ಮನಸ್ಸಿನಲ್ಲೇ ಲೆಕ್ಕ ಹಾಕುತ್ತಾ ಈಗಾಗಲೇ ಬಹಳಷ್ಟು ತಡವಾಗಿರುವುದನ್ನು ಅರಿತು ನಡಿಗೆಯ ವೇಗ ಹೆಚ್ಚಿಸಿದಳು.

●

# ಸೆಪ್ಟೆಂಬರ್ 17ರಂದು ಶ್ರೀನಿವಾಸ ಜೋಕಟ್ಟೆ ಸಾಹಿತ್ಯ ಚಿಂತನ ಕಾರ್ಯಕ್ರಮ

ಮುಂಬೈ:- ಮುಂಬೈನ ಕ್ರಿಯಾಶೀಲ ಲೇಖಕ, ಸಾಹಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಪಾತ್ರರಾದ ಶ್ರೀನಿವಾಸ ಜೋಕಟ್ಟೆ ಅವರ ಸಾಹಿತ್ಯ ಚಿಂತನ ಕಾರ್ಯಕ್ರಮವನ್ನು ಸೆಪ್ಟೆಂಬರ್ 17ರಂದು ಮಧ್ಯಾಹ್ನ 2ರಿಂದ ಮುಂಬಯಿ ವಿಶ್ವವಿದ್ಯಾಲಯದ ಜೆ.ಪಿ.ನಾಯಕ್ ಭವನದಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮುಂಬಯಿಯ ವರಿಷ್ಠ ಪೋಲೀಸ್ ಅಧಿಕಾರಿ ದಯಾನಾಯಕ್ ಅವರು ಭಾಗವಹಿಸಲಿದ್ದಾರೆ. ಡಾ.ಜಿ.ಎನ್.ಉಪಾಧ್ಯ ಅವರ ಅಧ್ಯಕ್ಷತೆಯಲ್ಲಿ ಜೋಕಟ್ಟೆ ಅವರ ಸಾಹಿತ್ಯ ಚಿಂತನ ಕಾರ್ಯಕ್ರಮ ನಡೆಯಲಿದ್ದು ಜೋಕಟ್ಟೆ ಅವರ ಗದ್ಯ ಸಾಹಿತ್ಯ (ದುರ್ಗಪ್ಪ ಕೋಟಿಯವರ್), ಕಥೆಗಾರರಾಗಿ ಜೋಕಟ್ಟೆ (ಶ್ರೀಮತಿ ರಮಾ ಉಡುಪ). ಕವಿಯಾಗಿ ಜೋಕಟ್ಟೆ (ಡಾ. ಪೂರ್ಣಿಮಾ.ಎಸ್.ಶೆಟ್ಟಿ), ಪ್ರವಾಸ ಸಾಹಿತ್ಯ(ಮಧುಸೂಧನ ರಾವ್) ಅವರು ಉಪನ್ಯಾಸ ನೀಡಲಿದ್ದಾರೆ.

ಇದೇ ಸಂದರ್ಭದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್.ಉಪಾಧ್ಯ ವಿರಚಿತ 'ಕ್ರಿಯಾಶೀಲ ಪತ್ರಕರ್ತ, ಸಾಹಿತಿ ಶ್ರೀನಿವಾಸ ಜೋಕಟ್ಟೆ' ಕೃತಿ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ಕೃತಿಯನ್ನು ಪ್ರಸಿದ್ಧ ರಂಗನಟ ಮೋಹನ್ ಮಾರ್ನಾಡ್ ಬಿಡುಗಡೆಗೊಳಿಸಲಿದ್ದಾರೆ. ಕೃತಿಯ ಕುರಿತು ಉದಯವಾಣಿಯ ಹಿರಿಯ ಉಪಸಂಪಾದಕ ಡಾ.ದಿನೇಶ್ ಶೆಟ್ಟಿ ರೆಂಜಾಳ ಮಾತನಾಡಲಿದ್ದಾರೆ. ಸಾಹಿತ್ಯಾಸಕ್ತರಿಗೆ ಆದರದ ಸ್ವಾಗತವಿದೆ ಎಂದು ವಿಭಾಗದ ಮುಖ್ಯಸ್ಥರಾದ ಡಾ.ಜಿ.ಎನ್.ಉಪಾಧ್ಯ ಅವರು ಪ್ರಕಟಣೆಯ ಮೂಲಕ ತಿಳಿಸಿದ್ದಾರೆ

## ನೇಸರ



- ಅನಿತಾ ಪಿ. ಪೂಜಾರಿ

ಮೆಲ್ಲ ಮೆಲ್ಲನೆ ಸಾಗುವ ನೇಸರ
ನಿನ್ನ ಬಣ್ಣ ಬಣ್ಣದ ನೆನಪುಗಳ
ಬಂಗಾರದ ರಶ್ಮಿಗಳೆಲ್ಲಿ?

ಮೆಲ್ಲನೆ ಹೆಸರಿಡಿದು ಕರೆದರೂ
ಹಠಾತ್ತನೆ ತಿರುಗಿ ನೋಡುವವ
ಇಂದು ನಿನ್ನ ಬಿಂಬವೆಲ್ಲಿ?

ಉಸಿರು ಬಿಗಿ ಹಿಡಿದು ನಿಂತ
ಮೊಗ್ಗು ಅರಳಿ ನಿರಾಳಗೊಂಡರೂ
ನೇಸರ ನಿನ್ನ ಸ್ಪರ್ಶ ಅದಕ್ಕೆಲ್ಲಿ?

ಗೌಜಿ ಇರದ ಮನೆಯೊಳಗೆ
ಹಗುರವಾಗಿ ಮಲಗಿರುವೆಯಲ್ಲಾ
ಮಧ್ಯಾಹ್ನವಾದರೂ ಬಿಸಿಲು ಕಾಯುವವ ನೀನೆಲ್ಲಿ?

ಬೆಂದ ಮನೆಯಲ್ಲುಳಿದ ಇದ್ದಿಲಿನಂತಿರುವ ಮೋಡಗಳು
ಎದೆ ಕರಗಿ ಒಂದೇ ಸಮನೆ ಕಣ್ಣೀರಿಡುತ್ತಿದ್ದರೂ
ಸಾಂತ್ವಾನ ಹೇಳಲು ನೀನೆಲ್ಲಿ?

ತಾನೊಬ್ಬನೇ ಜಗಕೆ ಬೆಳಕ ನೀಡುವವನೆಂದು
ಯಾವಾಗಲೂ ಹಮ್ಮು ಬಿಮ್ಮಿನಿಂದ
ಒಣಜಂಬದಿ ಬೀಗುವವ ನೀನೆಲ್ಲಿ?

ನಿರಾಸಕ್ತಿಯಿಂದ ಹೊದ್ದು ಮಲಗಿರುವೆಯಲ್ಲಾ
ಈ ಲೋಕದ ಗೊಡವೆ ನಿನಗಿಲ್ಲವೇ?
ಕವಿ ಮನಸ್ಸಿಗೆ ಸ್ಫೂರ್ತಿಯಾಗಿದ್ದು ಸಾಕು
ರಮಿಸು ಬಾ ನನ್ನ ರವಿಯಾಗಿ ಅಲ್ಲ ಕವಿಯಾಗಿ

# ಬಂಜೆತನದ ನೋವು

ಒಂದು ಸಂಸಾರವೆಂದರೆ ಅದರಲ್ಲಿ ಮನೆತುಂಬಾ ಓಡಾಡುವ ಮಗುವಿರಬೇಕು. ಆಗ ಮಾತ್ರ ಆ ಮನೆ ಆ ಸಂಸಾರ ಸಂತಸದಲ್ಲಿ ಇರಲು ಸಾಧ್ಯ. ಮಕ್ಕಳ ಕಿಲಕಿಲ ನಗು, ಮಾತುಗಳು ಆ ಮನೆಯವರ ಎಲ್ಲಾ ನೋವುಗಳಿಗೂ ಸಾಂತ್ವನದ ಕಂಪು ಬೀರುತ್ತದೆ. ಅದೇ ಆ ಹೆಣ್ಣು ಬಂಜೆಯಾಗಿದ್ದರೆ ?

ಬಂಜೆತನ ಹೆಣ್ಣಿನ ಬದುಕಿನಲ್ಲಿ ಕಣ್ಣೀರಿನ ಕೋಡಿಯನ್ನೇ ಹರಿಸುವ ಒಂದು ಪ್ರಕ್ರಿಯೆ. ಹೆಣ್ಣಿನ ವ್ಯಕ್ತಿತ್ವ ಚಲನಶೀಲವಾದದ್ದು ಒಂದು ಸಣ್ಣ ಬೀಜ ಸಸಿಯಾಗಿ, ಗಿಡವಾಗಿ, ಮರವಾಗಿ ಹೂ ಬಿಟ್ಟು ಕಾಯಾಗಿ ಹಣ್ಣಾಗಿ ಪುನಾಃ ಬೀಜವಾಗಿ ಪರಿವರ್ತನೆಯಾಗುವಂತೆ ಪ್ರತೀ ಸ್ತ್ರೀಯೂ ಮಗುವಿಗೆ ಜನ್ಮಕೊಟ್ಟು ವಂಶಾಭಿವೃದ್ಧಿ ನಡೆಯುತ್ತಾ ಹೋಗುತ್ತದೆ. ಇದು ಅನವರತ ಕ್ರಿಯೆ.

ಹೆಣ್ಣು ತನ್ನ ತಾಯಿಯ ಗರ್ಭಾಶಯದಲ್ಲಿರುವಾಗ ಇಪ್ಪತ್ತು ವಾರಗಳಿರುವಾಗಲೇ ಸುಮಾರು 6ರಿಂದ 7 ದಶಲಕ್ಷ ಅಂಡಾಣುಗಳನ್ನು ಹೊಂದಿರುತ್ತಾಳೆ. ಆದರೆ ಆಕೆಯ ಜೀವನದ ಸಮಯಕ್ಕೆ ಈ ಸಂಖ್ಯೆ 2 ದಶಲಕ್ಷಕ್ಕೆ ಇಳಿದಿರುತ್ತದೆ. ಹರೆಯಕ್ಕೆ ಬಂದಾಗ 6ರಿಂದ 7 ಲಕ್ಷಕ್ಕೆ ಇಳಿದಿರುತ್ತದೆ. ಆಕೆಗೆ 37 ವರ್ಷವಾಗುತ್ತಿದ್ದಂತೆ ಈ ಇಳಿತ ಮತ್ತಷ್ಟು ವೇಗವಾಗಿ ಸಾಗುತ್ತದೆ. ಅಂಡಾಣುಗಳ ಸಂಖ್ಯೆ ಕಡಿಮೆಯಾಗುವುದರ ಜೊತೆಗೆ ಅವುಗಳ ಗುಣಮಟ್ಟವೂ ಕಡಿಮೆಯಾಗುತ್ತದೆ. ಜೊತೆಗೆ ವಯಸ್ಸಾಗುತ್ತಿದ್ದಂತೆ ವರ್ಣತಂತುಗಳ ವಿಕೃತಿಯೂ ಹೆಚ್ಚಾಗುತ್ತದೆ. ಪುರುಷರಿಗೆ 40 ವರ್ಷ ವಯಸ್ಸಾಗುತ್ತಿದ್ದಂತೆ ಟೆಸ್ಟೋಸ್ಟಿರಾನ್ ಎಂಬ ಪುರುಷ ಹಾರ್ಮೋನಿನ ಉತ್ಪತ್ತಿ ಕಡಿಮೆಯಾಗುತ್ತಾ ಬರುತ್ತದೆ. ಆತನಿಗೆ ಇಪ್ಪತ್ತು ವರ್ಷಕ್ಕೆ ಇದ್ದ ಹಾರ್ಮೋನಿನ ಮಟ್ಟ ಆತನಿಗೆ 75 ವರ್ಷವಾದಾಗ ಅರ್ಧಕ್ಕೆ ಇಳಿದಿರುತ್ತದೆ. ಇದರಿಂದಾಗಿ ಆತನ ವೀರ್ಯದ ಪ್ರಮಾಣ ಚಲನೆ, ವೀರ್ಯಾಣುಗಳ ರಚನೆ ಇವುಗಳ ಗುಣಮಟ್ಟ ಕಡಿಮೆಯಾಗುತ್ತದೆ. ವಯಸ್ಸಾದಂತೆ ಪುರುಷ ವರ್ಣತಂತುವಿನಲ್ಲೂ ವಿಕ್ರತತೆ ಮೂಡುತ್ತದೆ.

ಎಷ್ಟೋ ದಂಪತಿಗಳಲ್ಲಿ ಮಗು ಮರೀಚಿಕೆಯಾಗಿ ಉಳಿದು ಬಿಡುತ್ತದೆ. ಅದಕ್ಕೆ ಆ ದಂಪತಿಗಳು ಮಾಡಿದ ಪಾಪ ಕಾರಣವಲ್ಲ. ಅಥವಾ ಯಾವುದೋ ಜನ್ಮದ ಕರ್ಮವೂ ಅಲ್ಲ. ದೇಹ ಪ್ರಕೃತಿಯಲ್ಲಿನ ದೋಷವೇ ವಿನಹಾ ಬೇರೆ ಕಾರಣವೇನೂ ಇರುವುದಿಲ್ಲ.

ಬಂಜೆತನವು ಸಂತಾನೋತ್ಪತ್ತಿ ಅಂಗವ್ಯೂಹದ ಒಂದು ದೋಷ. ಆರೋಗ್ಯ ಪೂರ್ಣ ವೀರ್ಯ ಉತ್ಪಾದನೆ, ಹೆಂಗಸಿನಲ್ಲಿ ಆರೋಗ್ಯವಂತ ಅಂಡಾಣುಗಳ ಉತ್ಪಾದನೆ ಏನೂ ತೊಂದರೆಯಿರದ ಪೆಲೋಪಿಯನ್ ನಾಳೆ (Fallopian Tube) ಮತ್ತು ಅದರಲ್ಲಿ ವೀರ್ಯವು ಅಂಡಾಣುವನ್ನು ಸೇರುವ ಅವಕಾಶ. ವೀರ್ಯಾಣುವು ಅಂಡಾಣುವನ್ನು ಸೇರಿದಾಗ ಅದನ್ನು ಫಲಪ್ರದ ಮಾಡುವ ಶಕ್ತಿ ಫಲಿತವಾದ ಅಂಡಾಣುವು ಮಹಿಳೆಯ ಗರ್ಭಾಶಯದಲ್ಲಿ ನೆಲೆಸುವ ಸಾಮರ್ಥ್ಯ ಮತ್ತು ಭ್ರೂಣದ ಗುಣಮಟ್ಟ ಅಂತಿಮವಾಗಿ ಗರ್ಭಧಾರಣೆಯ ಪೂರ್ಣಾವಧಿಯವರೆಗೆ ಮುಂದುವರೆಯುವ ಅವಕಾಶ. ಆರೋಗ್ಯವಂತ ಭ್ರೂಣ ಮಹಿಳೆಯ ಹಾರ್ಮೋನ್‌ಗಳ ಉತ್ತಮ ಪರಿಸರಗಳಿಂದ ಅದರ ಬೆಳವಣಿಗೆ ಸೂಕ್ತವಾಗಿರುವುದು ಇವೆಲ್ಲವುಗಳಲ್ಲಿ ಯಾವುದೇ ಒಂದು ಅಂಶವೂ ದೋಷಪೂರ್ಣವಾದರೂ ಬಂಜೆತನ ಎದುರಿಸಬೇಕಾಗುತ್ತದೆ.

ಗಂಡಸಿನ ಬಂಜೆತನಕ್ಕೆ ಸರ್ವೇ ಸಾಮಾನ್ಯ ಕಾರಣವೆಂದರೆ ವೀರ್ಯಾಣುಗಳ ಕೊರತೆ ಅಥವಾ ವೀರ್ಯಾಣುಗಳೇ ಇಲ್ಲದೇ ಇರುವುದು. ಪ್ರತೀ 1 ಮಿಲಿ ಲೀಟರ್‌ನಲ್ಲಿ 20 ಮಿಲಿಯನ್ ವೀರ್ಯಾಣುಗಳು ಗಂಡಿನ ವೀರ್ಯದಲ್ಲಿರುತ್ತದೆ. ವೀರ್ಯಾಣುಗಳ ಸಂಖ್ಯೆ ಕಡಿಮೆ ಇದ್ದರೆ ಗಂಡಸರು ತಕ್ಷಣ ವೈದ್ಯರನ್ನು ಭೇಟಿ ಮಾಡಬೇಕು. ವೀರ್ಯದ ಸಂಖ್ಯೆ ಹೆಚ್ಚಿಸಲು ಇಂದು ವೈದ್ಯ ವಿಜ್ಞಾನದಲ್ಲಿ ಹಲವಾರು ಔಷಧಿಗಳಿವೆ. ಆದರೆ ವೀರ್ಯದಲ್ಲಿ ವೀರ್ಯಾಣುವೇ ಇಲ್ಲದಿದ್ದರೆ ಫಲವತ್ತತೆಯ ಆಶಯವೇ ಇರುವುದಿಲ್ಲ. ಧೂಮಪಾನ ಆಲ್ಕೋಹಾಲ್, ಡ್ರಗ್ಸ್ ಚಟ ಇಟ್ಟುಕೊಂಡವರು ವೀರ್ಯಾಣುಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತದೆ. ವೀರ್ಯಾಣುಗಳು ಸಮರ್ಪಕ ಮಟ್ಟದಲ್ಲಿದ್ದರೂ ವೀರ್ಯಾಣು ಜೀವಕೋಶಗಳ ಅಸಮರ್ಪಕ ರಚನೆ ಮತ್ತು ಅವು ಅಂಡಾಣುಗಳನ್ನು ಸೇರುವ ಮೊದಲೆ ಸಾಯುವುದರಿಂದ ಸಂತಾನೋತ್ಪತ್ತಿಗೆ ತೊಂದರೆಯಾಗುತ್ತದೆ.

ಸ್ತ್ರೀಯರಲ್ಲಿ ಬಂಜೆತನಕ್ಕೆ ಬಹು ಸಾಮಾನ್ಯ ಕಾರಣ ಅವರ ಅಸಮರ್ಥವಾದ ಅಂಡಾಣು ನಿರ್ಮಾಣ. ಇನ್ನೊಂದು ಕಾರಣ ಫಿಲೋಫಿಯನ್ ನಾಳದಲ್ಲಿನ ಕೊರತೆ. ಹುಟ್ಟಿನಿಂದಲೇ ಇರುವ ದೋಷಪೂರಿತ ಗರ್ಭಾಶಯದ ರಚನೆ, ಗರ್ಭಾಶಯದಲ್ಲಿನ ಸಣ್ಣ ಪುಟ್ಟ ಗೆಡ್ಡೆಗಳು, ಸತತ ಗರ್ಭಸ್ರಾವಕ್ಕೆ ಕಾರಣವಾಗುತ್ತದೆ. ಬಂಜೆತನ್ನಕೆ ಸ್ತ್ರೀಯರೇ ಕಾರಣ ಎನ್ನುವ ಮಾತು ಸತ್ಯವಲ್ಲ. ಇಂದು ಬಂಜೆತನಕ್ಕೆ ಶೇಕಡಾ 42ರಷ್ಟು ಪುರುಷರು ಕಾರಣವಾದರೆ ಶೇಕಡಾ 38ರಷ್ಟು ಸ್ತ್ರೀಯರು ಕಾರಣರಾಗಿದ್ದಾರೆ ಎಂದು ಅಂಕಿ ಅಂಶಗಳಿಂದ ತಿಳಿದು ಬಂದಿದೆ.

ಪರಿಸರದಲ್ಲಾಗಲಿ ಕೆಲಸ ಮಾಡುವಲ್ಲಿಯಾಗಲಿ ರಾಸಾಯನಿಕಗಳಿಗೆ ಒಡ್ಡಿಕೊಳ್ಳುವ ಸಾಧ್ಯತೆ ಸ್ತ್ರೀಪುರುಷರಲ್ಲಿರುತ್ತದೆ. ಉದಾಹರಣೆಗೆ ದಂತ ವೈದ್ಯರು ನೈಟ್ರಸ್ ಆಕ್ಸೈಡ್‌ಗೆ ಹೆಚ್ಚಾಗಿ ಒಡ್ಡಲ್ಪಡುತ್ತಾರೆ. ಇದರಿಂದಾಗಿ ಮಕ್ಕಳಾಗುವ ಸಾಧ್ಯತೆ ಕಡಿಮೆಯಾಗುತ್ತದೆ. ಮಹಿಳೆಯರು ಕ್ಯಾಡ್‌ಮಿಯಮ್ ಪಾದರಸ ಇಂತಹ ರಾಸಾಯನಿಕಕ್ಕೆ ಒಡ್ಡಿಕೊಂಡರೆ ಗರ್ಭಧರಿಸುವ ಸಾಧ್ಯತೆ ಕಡಿಮೆಯಾಗುತ್ತದೆ. ಪುರುಷರು ಪರಿಸರದ ವಿಧಿಮತೆಗೆ ಹೆಚ್ಚಾಗಿ ತುತ್ತಾಗುತ್ತಾರೆ. ವೀರ್ಯಾಣುಗಳು ಪ್ರತಿ ಸೆಕೆಂಡಿಗೂ ಉತ್ಪತ್ತಿಯಾಗುವುದರಿಂದ ಹೆಚ್ಚು ಸೂಕ್ಷ್ಮವಾಗಿ ಪ್ರಭಾವಕ್ಕೊಳಗಾಗುತ್ತದೆ. ಅಲ್ಲದೆ ಮಹಿಳೆಯರಲ್ಲಿ ಅತೀ ಹೆಚ್ಚು ಅಥವಾ ಅತೀ

**✍ ಶಾರದಾ ಎ. ಅಂಚನ್**

ಕಡಿಮೆ ತೂಕದಿಂದ ಅಂಡಾಶಯಗಳ ಕಾರ್ಯ ಕುಗ್ಗುತ್ತದೆ. ಧೂಮಪಾನ ಮಾಡುವುದರಿಂದ ಮಹಿಳೆಯರಲ್ಲಿ ಗರ್ಭಧರಿಸುವ ಸಾಧ್ಯತೆ ಕಡಿಮೆಯಾಗುತ್ತದೆ. ಗರ್ಭಿಣಿಯಾಗಿದ್ದಲ್ಲಿ ಮಗುವಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಕಾಫಿ ಕುಡಿಯುವುದರಿಂದ ಗರ್ಭಪಾತ ಹೆಚ್ಚಾಗುತ್ತದೆ. ಗರ್ಭಿಣಿಯಾದವಳು ಮದ್ಯಪಾನ ಮಾಡುವುದರಿಂದ ಮಗುವಿಗೆ ದುಷ್ಪರಿಣಾಮವಾಗುತ್ತದೆ. ಆದರೆ ಗರ್ಭ ಧರಿಸಲು ಯಾವ ತೊಂದರೆಯೂ ಸಾಬೀತಾಗಿಲ್ಲ.

ಬಂಜೆತನವು ಸಾಮಾನ್ಯ ತೊಂದರೆಯಾಗಿ ಕಂಡು ಬಂದರೂ ಅದು ಸಮಾಜದಲ್ಲಿ ಅಸಾಮಾನ್ಯವಾಗುತ್ತದೆ. ಇದನ್ನು ನಿವಾರಿಸಲುವಲ್ಲಿ ಇಂದಿನ ವೈದ್ಯಕೀಯ ವಿಜ್ಞಾನದಲ್ಲಿ ಬಹಳಷ್ಟು ಚಿಕಿತ್ಸೆಗಳು ಚಾಲ್ತಿಯಲ್ಲಿವೆ. IUI (In uterus Inseminization) ಮತ್ತು IVF (In vitro Fertilization) ಮೂಲಕ ಇಂದು ಲಕ್ಷಾಂತರ ದಂಪತಿಗಳು ಮಕ್ಕಳನ್ನು ಪಡೆದು ಸಂತೋಷವಾಗಿದ್ದಾರೆ. IUI ನಲ್ಲಿ ಲೈಂಗಿಕ ಕ್ರಿಯೆಯ ಮೂಲಕ ಹೆಣ್ಣಿನ ಅಂಡಾಣುವನ್ನು ಸೇರದೆ ಫಲಿತಗೊಳ್ಳಲು ಅಸಮರ್ಪಕವಾದ ವೀರ್ಯಾಣುಗಳನ್ನು ವೈದ್ಯರು ಸಿರಿಂಜ್‌ನ ಮುಖಾಂತರ ಮಹಿಳೆಯ Fallopian ಟ್ಯೂಬ್‌ನಲ್ಲಿ ಹಾಕುತ್ತಾರೆ. ಆದರೆ ಇದರ ಫಲವತ್ತತೆಯ ಫಲಿತಾಂಶ ಶೇಕಡಾ 20ರಷ್ಟು ಮಾತ್ರ ಆಗಿದೆ.

IVF (ಪ್ರಣಾಳ ಶಿಶು) ನಲ್ಲಿ ಅಂಡಾಣುವನ್ನು ಶಸ್ತ್ರಕ್ರಿಯೆಯ ಮೂಲಕ ಅಂಡಾಶಯದಿಂದ ಹೊರಗೆ ತೆಗೆದು ಅದನ್ನು ಪೆಟ್ರಿಡಿಶ್‌ನಲ್ಲಿಟ್ಟು ವೀರ್ಯಾಣುವಿನ ಜೊತೆ ಸೇರಿಸುವುದು ಸುಮಾರು 40 ಗಂಟೆಗಳ ಕಾಲ ಅಂಡಾಣುಗಳು ವೀರ್ಯಾಣುಗಳ ಜೊತೆ ಸೇರಿ ಫಲಿತವಾಗಿವೆ ಎಂಬುದನ್ನು ಮತ್ತು ಕೋಶ ವಿಭಜನೆ ಆರಂಭವಾಗಿದೆ ಎಂಬುದನ್ನು ಖಾತ್ರಿಗೊಳಿಸಿ ಈ ಫಲಿತ ಬ್ರೂಣವನ್ನು ಮಹಿಳೆಯ ಗರ್ಭಾಶಯದಲ್ಲಿ ನೇರವಾಗಿ ಸ್ಥಾಪಿಸುವುದು ಈ ಚಿಕಿತ್ಸೆಯ ಫಲಿತಾಂಶ ಶೇಕಡಾ 40 ರಷ್ಟು ಆಗಿರುವುದರಿಂದ ಮಕ್ಕಳಿಗಾಗಿ ಹಂಬಲಿಸುವ ದಂಪತಿಗಳಿಗೆ ವೈದ್ಯರು ಈ ಚಿಕಿತ್ಸೆಯ ಸಲಹೆ ಕೊಡುತ್ತಾರೆ. ಇತ್ತೀಚಿನ ದಿನಗಳಲ್ಲಿ ವಿಜ್ಞಾನ ಇನ್ನಷ್ಟು ಮುಂದುವರೆದು ಬಾಡಗೆ ತಾಯಂದಿರ ಮೂಲಕವೂ ತಮ್ಮ ಕನಸಿನ ಕೂಸನ್ನು ಪಡೆಯುವ ಸೌಲಭ್ಯವಿದೆ.

ದಂಪತಿಗಳಲ್ಲಿ ಯಾರೊಬ್ಬರಾದರೂ ಸಂತಾನಕ್ಕೆ ಅಸಮರ್ಥರಾದರೆ ಅವರು ಒಬ್ಬರೊಬ್ಬರು ಒಳ್ಳೆಯ ದೃಷ್ಟಿಯಿಂದ ಉತ್ತಮ ಮನೋಭಾವದಿಂದ ಒಬ್ಬರನ್ನೊಬ್ಬರು ನಿಂದಿಸದೆ ದೂಷಿಸದೆ ಸಮಾಧಾನದಿಂದ ವೈದ್ಯರಲ್ಲಿ ಪರೀಕ್ಷಿಸಿಕೊಂಡು ಸಮಸ್ಯೆಗೆ ಕಾರಣ ತಿಳಿದುಕೊಂಡು ಸೂಕ್ತ ಸಲಹೆ ಮತ್ತು ಚಿಕಿತ್ಸೆಗಳನ್ನು ಪಡೆದುಕೊಂಡು ಬಂಜೆತನವನ್ನು ನಿವಾರಿಸಿಕೊಳ್ಳುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು. “ಸಮಸ್ಯೆ ಪ್ರತಿಯೊಬ್ಬರಿಗೂ ಇದೆ. ಆದರೆ ಸಮಸ್ಯೆಗಳಿಗೆ ಹೆದರದೆ ಧೈರ್ಯಗೆಡದೆ ಸಮಾಧಾನದಿಂದ ಪರಿಹಾರ ಹುಡುಕಿಕೊಳ್ಳುವುದೇ ಜೀವನದ ನಿಯಮವಾಗಿದೆ”. ■

# ಹೆಂಡತಿ ಮನೆಯೊಳಗಿರದಿದ್ದರೆ....

ಕೆ.ಜಿ. ಭದ್ರಣ್ಣವರ, ಮುದ್ದೇಬಿಹಾಳ

"ಹೆಂಡತಿಯೊಬ್ಬಳು ಮನೆಯೊಳಗಿದ್ದರೆ, ನನಗದು ಕೋಟಿ ರೂಪಾಯಿ" ಎಂಬ ಕವಿಯ ಹಾಡು ಜನ-ಜನಿತ. ಹೀಗೆ ಹಾಡಿದ ಕವಿಯ ಹೆಂಡತಿಯು ತವರು ಮನೆಯಿಂದ ಆಗರ್ಭ ಶ್ರೀಮಂತಳಾಗಿದ್ದು, ಗಂಡನಿಗೆ ಸಾಕಷ್ಟು ಹಣ ತಂದುಕೊಡುವವಳಾಗಿರಬಹುದು ಅಥವಾ ಸದ್ಗುಣಿಯಾಗಿರಬಹುದು!. ಹೆಂಡತಿ ಮನೆಯೊಳಗಿದ್ದಾಗ, ಕವಿ ಸಂತೋಷ, ನೆಮ್ಮದಿ ಅನುಭವಿಸಿದ್ದಾನೆ. ಆದರೆ, ಎಲ್ಲರ ನಶೀಬು ಒಂದೇ ಥರಹ ಇರೋದಿಲ್ಲ. 'ಸಹಧರ್ಮಿಣಿ ಸಿಕ್ಕರೆ ಸಂಸಾರಿಯಾಗಿ ಬಾಳುವದರಲ್ಲಿ ಸುಖವಿದೆ. ಗಯ್ಯಾಳಿ ಸಿಕ್ಕರೆ ಸನ್ಯಾಸಿಯಾಗಿ ಮನೆ ಬಿಟ್ಟು ಹೋಗುವದರಲ್ಲಿ ಸುಖವಿದೆ!. ಇದು ಅನುಭಾವಿಯೊಬ್ಬರ ಅಮೃತ ನುಡಿ. ಹೆಂಡತಿ ಗಂಡನನ್ನು ಬಿಟ್ಟು ತವರಿಗೆ ಹೊರಟರೆ, ಕೆಲವರು ಅನಾಥರಂತೆ ಅಳುತ್ತಾರೆ!. ಇನ್ನು ಕೆಲವರು ಸ್ವಾತಂತ್ರ್ಯ ಸಿಕ್ಕಿತು, ಪೀಡೆ ತೊಲಗಿತೆಂದು ಕುಣಿದು ಕುಪ್ಪಳಿಸುತ್ತಾರೆ. ಇದು ಅವರವರ ಪ್ರಾರಬ್ಧ ಬಿಡಿ!. ಹೆಂಡತಿ ಮನೆಯೊಳಗಿರದಿದ್ದಾಗ ಎಂತೆಂಥಹ ಯಡವಟ್ಟುಗಳನ್ನು ಅನುಭವಿಸಿದ್ದೇನೆ! ಎಂಬುದನ್ನು ವಿವರಿಸುವುದು ಈ ಲೇಖನದ ಉದ್ದೇಶ. ಹೆಂಡತಿ ಕೆಲವು ಕಾಲ ತವರಿಗೋ, ಅಕ್ಕನ ಅಥವಾ ತಂಗಿಯ ಬಾಣಂತನಕ್ಕೆಂದು ಹೋದಾಗ, ಅಥವಾ ತನ್ನ ಎರಡನೆಯ, ಮೂರನೆಯ ಹೆರಿಗೆಗೆ ತವರಿಗೆ ಹೋದಾಗ, ನಾನು ಪಟ್ಟ ಪಾಡುಗಳ ಪಟ್ಟಿ ಇದೆ ಇಲ್ಲಿ.

ಮಕ್ಕಳ ವಾರ್ಷಿಕ ಪರೀಕ್ಷೆಗಳೆಲ್ಲ ಮುಗಿದವು. ಮಕ್ಕಳನ್ನು ಕರೆದುಕೊಂಡು, ತಿಂಗಳೊಪ್ಪತ್ತು ತವರೂರಿಗೆ ಹೋಗಿಬರ ಬೇಕೆಂದು ಮಡದಿಗೆ ಆಸೆಯಾಯಿತು. ನಮ್ಮ ಮದುವೆಯಾಗಿ ಇಪ್ಪತ್ತು ವರ್ಷಗಳಾಗಿವೆ. ನಾಲ್ಕು ಮಕ್ಕಳಿವೆ!. ಒಂದೇ ಜಾಗೆಯಲ್ಲಿದ್ದು ಅವರಿಗೆಲ್ಲ ಬೇಜಾರಾಗೋದು ಸಹಜ. ನಾನಂತೂ ಹಗಲೆಲ್ಲ ದುಡಿದು, ಕೊಟ್ಟಿಗೆಯಲ್ಲಿ ಮಲಗುವ ದನ ಆಗಿದ್ದೆ. ಪಾಪ ನನ್ನವಳನ್ನು ಹನಿ ಮೂನಿಗೂ ಎಲ್ಲೂ ಕರೆದೊಯ್ಯಲಾಗಲಿಲ್ಲ. !! ನಿಮ್ಮನ್ನು ಕಟ್ಟಿಕೊಂಡು ಯಾವ ಸುಖಾನೂ ಅನುಭವಿಸಲಿಲ್ಲ!! ಈ ಮಾತನ್ನು ನೂರು ಬಾರಿಯಾದರೂ ಅವಳು ಅಂದಿರಬಹುದು. "ಯಾವ ಸುಖಾನೂ ಅನುಭವಿಸಲಿಲ್ಲ ಅಂತಾ ಸುಳ್ಳು ಯಾಕೆ ಹೇಳ್ತೀ. ನಾಲ್ಕು ಮಕ್ಕಳು ಸುಮ್ಮನೇ ಹಡೆದೆಯಾ!" ಮಾತಿನಲ್ಲಿ ಸೋಲಿಸುವ ಉದ್ದೇಶ ನನ್ನದಾಗಿತ್ತು. 'ಬರೀ ಮಕ್ಕಳ ಹಡೆದರೆ ಅದೇ ಪರಮ ಸುಖಾ ಅಂತಾ ನೀವು ತಿಳಿಧಾಂಗಿದೆ. ನಾಯಿ, ಹಂದಿ ನೋಡಿ, ಮನುಷ್ಯರಿಗಿಂತ ಜಾಸ್ತಿ ಮರಿ ಹಾಕ್ತವೆ'. ಅವಳನ್ನು· ಸೋಲಿಸಲಾಗುವದಿಲ್ಲವೆಂದು ತಿಳಿದು, "ಆಗಲಿ, ನಿನ್ನ ಕೂಡ ವಾದ ಬೇಡ. ನಿನಗೆ ಎಷ್ಟು ದಿವಸ ಬೇಕೋ ಅಷ್ಟು ದಿವ ಇದ್ದು ಬಾ. ಗ್ರೀನ್ ಸಿಗ್ನಲ್ ಕೊಟ್ಟೆ. ಹತ್ತಾರು ಸೀರೆ, ಮಕ್ಕಳ ಬಟ್ಟೆಬರೆ ಸೇರಿ ನಾಲ್ಕಾರು ಲಗೇಜುಗಳಾದವು. ಹೊರಡುವ ಮುನ್ನ ಅಡಿಗೆ ಕೋಣೆಗೆ ನನ್ನನ್ನು ಕರೆದಾಗ, ನನ್ನ ರಸಿಕತೆ ಉಕ್ಕಿತು. ಮುತ್ತು ಕೊಡಲು ಕರೆಯುತ್ತಿರಬಹುದೆಂದು ಉತ್ಸಾಹದಿಂದ ಒಳಗೋಡಿದೆ. ಮಕ್ಕಳು ಹೊರಗೆ ಇದ್ದರು. ಒಳ್ಳೆಯ ಅವಕಾಶವೆಂದು, ಬಲವಾಗಿ ತಬ್ಬಿಕೊಂಡಾಗ, 'ಛೀ! ಇದಕ್ಕಲ್ಲರೀ ನಾನು ಕರೆದದ್ದು. ಯಾವ ಯಾವ ಸಾಮಾನು ಯಾವ ಡಬ್ಬದಲ್ಲಿವೆಯೆಂದು ತೋರಿಸಲು. ಇದರಲ್ಲಿ ಸಕ್ಕರೆ ಇದೆ, ಇದರಲ್ಲಿ ಜೀರಿಗೆ ಇದೆ, ಇದರಲ್ಲಿ ಚಹಾಪುಡಿ ಇದೆ, ಬೆಲ್ಲ ಈ ಡಬ್ಬಾದಲ್ಲಿದೆ.... ಬಸ್ಸಿನ ವೇಳೆಯಾಯ್ತು ಬಾರಮ್ಮಾ ಎಂದು ಮಕ್ಕಳು ಅವಸರ ಮಾಡುತ್ತಲೇ ಇವೆ. ಇವಳ ಕಾಳಜಿಯೇ ಬೇರೆ. ತಾನಿಲ್ಲದಾಗ, ನನಗೆ ಸಾಮಾನು ಹುಡುಕುವದು ಕಷ್ಟವಾಗಬಾರದು ಎಂಬುದು. ನನ್ನ ಚಡಪಡಿಕೆಯೇ ಖರೇ. ಇವಳಿಲ್ಲದೇ ಹೇಗಿರಬೇಕು ಬಲವಾಗಿ ತಬ್ಬಿಕೊಂಡಾಗ, 'ಮಕ್ಕಳು ಇಲ್ಲೇ ಅದಾರ. ಕೈ ಬಿಡ್ರಿ!' ಎಂದು ಕೊಸರಿಕೊಳ್ಳುವಾಗ ಹತ್ತು ವರ್ಷದ ಹರ್ಷ ಬಾಗಿಲಲ್ಲಿ ಕಾಲಿಡುತ್ತಾ, "ಅವ್ವ ಊರಿಗೆ ಹೊಂಟಾಳ. ಈಗಲೂ ಜಗಳಾನಾ ಅಪ್ಪಾ ನಿಂದು" ಅಂದ. 'ಇಲ್ಲಪಾ ಈಗ್ಯಾತರ ಜಗಳ. ಅಲ್ಮೀರಾದ ಕೀಲಿ ಕೊಡು ಅಂದೆ. ಕೊಡಾವಳ್ಳು. ಕಸಗೊಳ್ಳಾಕ ಹತ್ತಿದ್ದೆ' ಅಂದೆ. ಮಗ 'ಕೊಟ್ಟು ಬಿಡಮ್ಮಾ ನಿಂದೂ ಯಾವತ್ತೂ ಬಲು ತಕರಾರು'. ಮಗನಿಗೇನು ಗೊತ್ತು ಇಲ್ಲಿ ನಡೆದ ಕೊಸರಾಟ! ನನ್ನವಳು ಮುಖ ಕೆಂಪಗೆ ಮಾಡಿಕೊಂಡು, ಮುಗುಳ್ನಗುತ್ತಾ ಹೊರ ನಡೆದಳು.

ಬಸ್ ನಿಲ್ದಾಣಕ್ಕೆ ಬಂದಾಗ, ಮಕ್ಕಳ ಉತ್ಸಾಹ ಮುಗಿಲು ಮುಟ್ಟಿತ್ತು. ಬಸ್ ಬಂತು. ಕಿಡಿಕಿಯಲ್ಲಿ ಗೋಣು ಹೊರಹಾಕಿ, "ಹಾಲೇನೂ ಕಮ್ಮಿ ಮಾಡಕ ಹೊಗಬ್ಯಾಡ್ರಿ. ಸಾರು ಮಾಡಿಕೊಳ್ಳಾಕ ಆಗದಿದ್ರೆ ಹಾಲು ಅನ್ನ ಉಣ್ರೀ. ಮ್ಯಾಲಿಂದ ಮ್ಯಾಲ ಅಡಿಗಿ ಮನಿ ಕದ ಮುಚ್ಚೋದು ಮರೀಬ್ಯಾಡ್ರಿ. ಬೆಕ್ಕಿಗೆ ಒಮ್ಮೆ ಸವಿ ಹತ್ತಿತು ಅಂದ್ರ, ಬಿಡೊದಿಲ್ಲದು. ಕಸ ಮುಸ್ರೆ ಮಾಡು ಹುಡುಗಿಗೆ ಬಾಳ ಸಲಿಗಿ ಕೊಡಬ್ಯಾಡ್ರಿ. ರೊಕ್ಕಾ ಪಕ್ಕಾ ಸಾಲ ಕೇಳಿದ್ರ ಕೊಡಾಕ ಹೋಗಬ್ಯಾಡ್ರಿ. ಹುಡಿಗಿ ಬಾಳ ಚಾಲಾಕ ಆದಾಳ! ಹುಷಾರು! ಟೈಮು ಹೀಂಗ ಸುಮಾರಿದ್ರ ಏನು ಮಾಡೋದು! ನಾ ಬರೂತನಕ ಸುಮ್ನ ಆಕೀನ್ನ ಕೆಲಸಕ್ಕ ಬರಬ್ಯಾಡ ಅಂತಾ ಹೇಳಿ ಬಿಡ್ರಿ. ದಡ್ಯಾಗ ಪ್ಯಾರಲ ಹಣ್ಣು ಏಸಕೊಂದ ಆಗ್ಯಾವ. ಕಷ್ಟ ಪಟ್ಟು ನೀರು, ಗೊಬ್ಬರ ಹಾಕಿ ಬೆಳೆಸೀನಿ. ನೀವು ಆಫೀಸ್‌ಗೆ ಹೋದಾಗ ಯಾವರ ಹರಕೊಂಡ ಹೋಗ್ತಾವೇನ...! ಅವಳ ದೀರ್ಘ ಪ್ರವಚನ ಎಡೆ ಬಿಡದೇ ಸಾಗಿತ್ತು. ಡ್ರೈವರು ಬಸ್ ಬಿಟ್ಟ. ಮರೆಯಾಗುವ ತನಕ ಪರಸ್ಪರ ಕೈ ಬೀಸಿದೆವು. ಜೂಜಿನಲ್ಲಿ ಸೋತವನ ಹಾಗೆ, ಕಾಲೆಳೆಯುತ್ತಾ ಮನೆ ಸೇರಿದೆ. ಸಂತೆಯ ಹಾಗೆ ಗದ್ದಲವಿದ್ದ ಮನೆ ಬಿಕೋ ಅನ್ನುತ್ತಿತ್ತು!. ನಾನು ಒಬ್ಬಂಟಿಯಾಗಿ ಕುಳಿತೆ. ಬದುಕಿನ ಬಗ್ಗೆ ಇಷ್ಟೊಂದು ವ್ಯಾಮೋಹ ಇಟ್ಟಿಕೊಂಡಾಕೆ, ತವರಿಗೆ ಯಾಕೆ ಹೋಗಬೇಕಿತ್ತು. ನನಗೆ ಚೆನ್ನಾಗಿ ಗೊತ್ತು, ಅವಳು ತವರು ಮನೆಯಲ್ಲಿದ್ದರೂ ಅವಳ ಮನಸ್ಸೆಲ್ಲಾ ಸದಾ ಈ ಮನೆಯೊಳಗೆ ಮತ್ತು ನನ್ನ ಸುತ್ತಾ ಗಿರಕಿ ಹೊಡೆಯುತ್ತಿರುತ್ತದೆ. 'ವಂಶಾಭಿವೃದ್ಧಿಗಾಗಿ ಹಕ್ಕಿ ಗೂಡು ಕಟ್ಟುತ್ತದೆ, ಮಡದಿ ಮನೆ ಕಟ್ಟುತ್ತಾಳೆ'. ಪುರುಷನ ಬದುಕಿನಲ್ಲಿ ಹೆಣ್ಣು ಇರದೇ ಇದ್ದರೆ?!. ನನಗೆ ಯೋಚಿಸಲೂ ಕಷ್ಟವಾಯಿತು. ಅವಳ ಮಾತುಗಳ ನೆನಪಾಗತೊಡಗಿದವು. 'ಮನೆಯಲ್ಲಿ ಎಲ್ಲಾ ಇದೆ. ಖಾನಾವಳಿಗೆ ಹೋಗೋ ಅವಶ್ಯಕತೆ ಇಲ್ಲ. ಅನ್ನ ಸಾರು ಮಾಡಿಕೊಳ್ಳಿ. ತಿಂಗಳಿಗೆ ಆಗುವಷ್ಟು ತೆಳ್ಳಗೆ ರೊಟ್ಟಿ ಮಾಡಿ ಇಟ್ಟೇನಿ, ಸೇಂಗಾ, ಗುರೆಳ್ಳು, ಅಗಸಿ, ಪುಟಾನಿ ಚಟ್ನಿ ಮಾಡಿಟ್ಟೇನಿ. ರಾತ್ರಿ ಹೆಪ್ಪು ಹಾಕಿ ಮೊಸರು ಮಾಡಿಕೊಳ್ರಿ, ಬೇಕಾದ್ರ ಒಂದಿಷ್ಟು ತರಕಾರಿ ತಂದು ಪಲ್ಯ ಮಾಡಿಕೊಳ್ರೀ...." ಮಗುವಿಗೆ ಪಾಠ ಹೇಳಿದ ಹಾಗೆ ಹೇಳಿದ್ದಳು. ಮರುದಿನದಿಂದ ಸುರುವಾಯ್ತು, ಪುರುಷ ಪಾಕ!. ಬೆಳಿಗ್ಗೆ ಹಾಲು ಬಂದಕೂಡಲೇ ಬರ್ನರ್ ಮೇಲೆ ಕಾಯಿಸಲು ಇಟ್ಟೆ. ಅಷ್ಟರಲ್ಲಿ ದಿನಪತ್ರಿಕೆ ಬಾಗಿಲಲ್ಲಿ ಬಿತ್ತು. ನೋಡಿದೆ. ನಾನು ಕಳಿಸಿದ್ದ ವಿನೋದ ಲೇಖನ ಪ್ರಕಟವಾಗಿತ್ತು. ಬೇರೆಯವರು ಓದಲಿ ಬಿಡಲಿ, ಬರೆದವನಿಗೆ ಕೆಟ್ಟ ಕುತೂಹಲ. ಒಮ್ಮೆ ಪ್ರಕಟಿತ ಲೇಖನ ಓದಬೇಕು. ಸಂತೋಷ ಹತ್ತಿಕ್ಕಿಕೊಳ್ಳಲಾರದೇ, ಓದುತ್ತಾ ಕುಳಿತೆ. ಅಡಿಗೆ ಮನೆಯಿಂದ ಹೊತ್ತಿದ (ಸೀದ) ಕೆಟ್ಟ ವಾಸನೆ ಹೊರಗೆ ವೆರಾಂಡದಲ್ಲಿ ಕುಳಿತಿದ್ದ ನನ್ನ ಮೂಗಿಗೆ ಬಡಿಯಲಾರಂಭಿಸಿತು!. ಗಾಬರಿಯಿಂದ ಎದ್ದು ಹೋಗಿ ನೋಡಿದೆ. ಒಂದು ಲೀಟರು ಹಾಲು ಸಂಪೂರ್ಣ ಬತ್ತಿ ಕರಕಲಾಗಿ ಹೋಗಿತ್ತು!. ಬೋಗುಣಿ ಕರಗಿರಲಿಲ್ಲ. ನನ್ನ ಮರೆವಿಗೆ ಮರುಗಿದೆ. ಲೇಖನ ಆ ಮೇಲೆ ಓದಿದರೂ ಆಗುತ್ತಿತ್ತು. ಬೋಗುಣಿಯ ತಳಕ್ಕೆ ಗಟ್ಟಿಯಾಗಿ ಅಂಟಿದ ಕರಕಲನ್ನು ಕೆರೆದು ತೆಗೆಯಲು ಮೂರು ದಿನಗಳೇ ಬೇಕಾದವು!. ಸಾಹಿತ್ಯದ ಗೀಳನ್ನು ಕೆಲವರು ಹುಚ್ಚಿಗೆ ಹೋಲಿಸುತ್ತಾರೆ. ಇದು ನಿಜ. ಮನೆಯಲ್ಲಿ ನಾನಿರುವಾಗ ಕಮಲಿ ಕಸ ಮುಸರೆ ಕೆಲಸಕ್ಕೆ ಬರುತ್ತಿರಲಿಲ್ಲ. "ನೀವು ಹಿಂದ ದಡ್ಯಾಗ ಭಾಂಡೆ ಸಾಮಾನು ಇಟ್ಟು ಹೋಗ್ರಿ. ನಾ ತಿಕ್ಕಿ ಇಟ್ಟಿರ್ತಿನಿ. ಸಂಜೀಕೆ ಬಂದು ಒಳಗೆ ಇಟ್ಗೊಳ್ರಿ". ನನ್ನವಳ ಅನುಮಾನ ನಿಜವಿರಬಹುದೇ ಅನ್ನಿಸಿತು. ನನ್ನವಳು ಮನೆಯಲ್ಲಿ ಇರದುದಕ್ಕಾಗಿ ಮನೆ ಕಸ ತೆಗೆಯುವದು, ಪರಸಿ

ಒರೆಸವದು ನಾನೇ ಮಾಡಬೇಕಾಯ್ತು!. ಕಮಲಿ ಅಂಥಹ ಸುಂದರವಾದ ಹೆಣ್ಣಲ್ಲವಾದರೂ, ಹದಿನೆಂಟರ ಹರೆಯ. ಅವಳ ಆಕರ್ಷಣೆಗೆ ತೋರಣ ಕಟ್ಟಿತ್ತು. ಹೈಸ್ಕೂಲಿನಲ್ಲಿ ಓದುವಾಗ ನಮ್ಮ ಶಿಕ್ಷಕರು ಹೇಳಿದ ಮಾತು ನೆನಪಾಯ್ತು. 'ಹರೆಯವಿದ್ದಾಗ ಹಂದಿಯ ಮರಿಯೂ ಸುಂದರವಾಗಿಯೇ ಕಾಣುತ್ತದೆ!'. ಅಂದು ರವಿವಾರ ರಜೆಯಿತ್ತು. ಕಮಲಿಯ ದಾರಿ ಕಾಯುತ್ತಾ ಮನೆಯಲ್ಲಿಯೇ ಕುಳಿತೆ. ಅಂತೂ ಕಮಲಿ ಬಂದಳು. ಅವಳ ಆತಂಕವನ್ನು ದೂರ ಮಾಡಲು, 'ಕಮಲಾ, ನಾನು ದೆವ್ವಾನೂ ಅಲ್ಲ, ಹಾವುನೂ ಅಲ್ಲಾ ಹೆದರಬ್ಯಾಡ' ಅಂದೆ. ಅವಳು ಆಗಾಗ ಸೆರಗು ಸರಿಮಾಡಿಕೊಳ್ಳು ಮರೆಯುತ್ತಿರಲಿಲ್ಲ!.

"ಅವ್ವಾರು ಮನ್ಯಾಗಿದ್ರ ಮನೀ ಕಳಾನ ಬ್ಯಾರೆ ಇರ್ತದ ನೋಡ್ರಿ ಈಗ ಮನಿ ಭಣಾ ಭಣಾ ಅಂತದ" ಅಂದಳು. "ಖರೇ ಆದ. ನಾ ಒಬ್ನ ಮೂಕನ್ಹಂಗ ಕೂಡ್ರಬೇಕು. ನೀನರ ಇದ್ರ ನಿನ್ನ ಜೊತಿ ಮಾತಾಡ ಬಹುದು" ಅಂದೆ. "ನೀವು ಒಬ್ಬರ ಮನ್ಯಾಗ ಇದ್ದಾಗ ನನಗೆ ಹೆದರಕಿ ಬರ್ತದ" ಕಮಲಿ ನಕ್ಕೋತಾ ಹೋದಳು.

ನಾನು ಆಫೀಸಿಗೆ ಹೋದಾಗ ಉಡಾಳ ಹುಡುಗರು ಬಂದು, ಹಿತ್ತಲದೊಗಿನ ಎಲ್ಲಾ ಪೇರಲ ಹಣ್ಣು ಹರಕೊಂಡ ಹೋಗಿದ್ರು. ನಮ್ಮಾಕಿ ತವರಿಗೆ ಹೋಗಿದ್ದು ಹಿತ್ತಲದೊಳಗಿನ ಹಣ್ಣು ಕದಿಯಲು ಅನುಕೂಲವಾಗಿತ್ತು. ರಾತ್ರಿ ನಿದ್ದಿ ಇರಲಾರದ ಅತ್ಲಾಗ ಇತ್ಲಾಗ ಹೊರಳಾಡತಿದ್ದೆ. ನನ್ನವಳ ಫೋನು,

'ಏನ್ ಮಾಡ್ಲಾಕ ಹತ್ತೀರಿ?'

'ಮಲ್ಕೊಂಡೀನಿ'

'ಒಬ್ಬರ ಅದೀರೋ! ಇಲ್ಲಾ.....!'

'ಮತ್ಯಾರ ಬರ್ತಾರ'

'ನೀವು ಅಂಥವರಲ್ಲಾ! ಸುಮ್ನ ಕೇಳ್ದೆ'

'ನೀನರಲಾರದಕ್ಕ ನನಗ ನಿದ್ದಿ ಬರಾವಲ್ದು. ಬರೇ ನಿನ್ನದ ನೆನಪು'.

"ನನಗೂ ಹಂಗಾ ಆಗಾತಿ ಮಗ್ಗಲ ನೀವಿದ್ರ ನಿದ್ದೀ ಮಾಡಿಸಿಕೊಡೋದಿಲ್ಲ, ನೀವು ಇರಲಿಲ್ಲಾಂದ್ರೂ ನಿದ್ದಿ ಬರಾಂಗಿಲ್ಲ"

'ಮತ್ಯಾಕ ಅದೀ ಅಲ್ಲೆ ಬಂದ ಬಿಡು. ನನಗೂ ಇಲ್ಲೆ ಬ್ಯಾಸರ ಆಗ್ಲಿಕ್ಕ ಹತ್ತೇದ' ಅಂದೆ.

'ಹುಡುಗ್ರು ಸೂಟಿ ಮುಗಿಯೂತನಕ ಇಲ್ಲೇ ಇರೊನು ಅಂತಾರ'.

'ಹುಡುಗರ ಕೂಡ ನೀನು ಹುಡುಗಿ ಆಗಿ ಆಡಿಕೋತಾ ಇರು' ಸಿಟ್ಟೀಲೆ ಫೋನು ಇಟ್ಟೆ.

ಸಂಡಾಸಕ ಕುಳಿತಾಗ, ಹಾಲಿನ ಹುಡುಗ ಒಂದೇ ಸಮ ಕಾಲಿಂಗ್ ಬೆಲ್ ಬಾರಿಸ್ತಾ ಇದ್ದಾನೆ!. ಹಾಳಾದವ!. ಅವನ ಆತುರಕ್ಕಾಗಿ ಅವನ ಮೇಲೆ ಸಿಟ್ಟು ಬಂತು. ಅವಸರದಿಂದ ಎದ್ದು ಬಂದು, "ಏನಪ್ಪಾ! ಸ್ವಲ್ಪ ತಡಕೊಳ್ಳಾಕಾಗೂದಿಲ್ಲೇನು? ಸಂಡಾಸಕ್ಕ ಕೂತಿದ್ದೆ!. ಒಂದೇ ಸಮಾ ಬೆಲ್ ಬಾರಸ್ತೀಯಲ್ಲ" ಎಂದು ಅಂದೆ ಅಸಮಾಧಾನದಿಂದ.

'ನೀವು ಪಾಯಖಾನಿಯೊಳಗ ಕುಂತದ್ದು ನನಗ ಹ್ಯಾಂಗ್ ತಿಳಿಬೇಕ ಬಿಡ್ರಿ!'. ಅನಕೋತಾ ಹಾಲು ಹಾಕಿ ಹೋದ. ಆ ದಿವಸ ಮುಂಜಾನೆ ದಾಡಿ ಮಾಡಿಕೋತ ಕುಳಿತಿದ್ದೆ. ದಾಡೀ ಮುಗಿದ ಮ್ಯಾಲೆ ಹಾಲು ಕಾಯಿಸಿದರಾಯ್ತೆಂದು ಹಾಲು ಒಲೀಮ್ಯಾಲೆ ಇಟ್ಟಿರಲಿಲ್ಲ. ಹಾಳಾದ ಮರೆವು. ಅಡಿಗಿಮನಿ ಬಾಗಲಾ ಮುಚ್ಚೋದು ಮರೆತೆ. ಬೆಕ್ಕು ಎಲ್ಲಿ ಕಾಯ್ಕೋತಾ ಕೂತಿತ್ತೋ ಏನೋ?! ಒಂದ ಲೀಟರ್ ಹಾಲು ಪೂರಾ ಕುಡಿದು ಹೊರ ಬರುವಾಗ, ನನ್ನನ್ನು ನೋಡುತ್ತಾ, ಮೀಸೆಯ ಮೇಲೆ ನಾಲಿಗೆಯಾಡಿಸುತ್ತಾ ಬಾಗಿಲಲ್ಲಿ ಎದುರಾಯಿತು. ನನ್ನನ್ನು ಸೋಲಿಸಿ, ಯುದ್ಧದಲ್ಲಿ ಗೆದ್ದವನ ಠೀವಿ ಅದರ ನಡಿಗೆಯಲ್ಲಿ ಕಾಣುತ್ತಿತ್ತು. ನನ್ನವಳು ಮನೆಯೊಳಗಿದ್ದರೆ ಹೀಗಾಗುತ್ತಿತ್ತೇ? ಎಂದು ಹಣೆ ಜಜ್ಜಿಕೊಂಡೆ. ಆಗ ಹನಿಗವನ ಬರೆದೆ,

ನಲ್ಲೆ, ನೀ ತವರಿಗೆ
ತೆರಳಿದಾಗ ತಿಳಿಯಿತು,
ಅಂಗನೆಯಿಲ್ಲದವನ
ಬದುಕಿಗೂ,
ಅಂಗಹೀನನ
ಬದುಕಿಗೂ
ಸಾಮ್ಯವಿದೆಯೆಂದು!.

ಮಡದಿ ಮಗ್ಗಲಲ್ಲಿರಬಹುದೆಂದು, ನಿದ್ದೆಗಣ್ಣಲ್ಲಿ ಅವಳ ನಡುವಿನ ಮೇಲೆ ಕಾಲು ಹಾಕಲು ಹೋದೆ. ಮೊಣಕಾಲು ಗೋಡೆಗೆ ಬಡಿಯಿತು. ಎರಡು ದಿನ ಕುಂಟುತ್ತ ನಡೆದೆ!. ಕೇಳಿದವರೆದುರು ಸುಳ್ಳು ನೆವ ಹೇಳಿದೆ. ಹೆಂಡತಿ ಹತ್ತಿರವಿದ್ದಾಗ ಕೆಲವು ಸಲ ಉರಿಬಿಸಿಲು ಅನಿಸುತ್ತದೆ, ದೂರವಿದ್ದಾಗ ಅವಳು ಬೆಳದಿಂಗಳಿನಂತೆ ತಂಪೆರೆಯುತ್ತಾಳೆ. ಮಡದಿ ಎಚ್ಚರವಿದ್ದಾಗ ಮಲಗು ಅನ್ನುತ್ತಾಳೆ, ಮಲಗಿದಾಗ ಎಬ್ಬಿಸುತ್ತಾಳೆ. ಹೆಂಡತಿಯಿಲ್ಲದವನ ಬದುಕು ಅಪೂರ್ಣ, ನೀರಸ. ಅಂಗಳದಲ್ಲಿ ರಂಗೋಲಿ ಇಲ್ಲ!. ಮನೆಯಲ್ಲಿ ದೂಳು ತುಂಬಿದೆ. ಸಾಮಾನು ಅಸ್ತವ್ಯಸ್ತ ಬಿದ್ದಿವೆ. ಮನೆಯಲ್ಲಿ ಕಳೆ ಇಲ್ಲ. ಮಕ್ಕಳ ನಗುವಿಲ್ಲ-ಅಳುವಿಲ್ಲ. ಜೇಲಿನಲ್ಲಿ ಕೈದಿಯ ಹಾಗೆ ಜೀವನವಾಗಿತ್ತು. ದಿನಗಳು ಹೀಗೆ ಮಡದಿಯ ನೆನಪಲ್ಲೇ ಕಳೆಯುತ್ತಿರಲು, ರಾತ್ರಿ ಆಕಸ್ಮಿಕವಾಗಿ, ನನ್ನವಳ ಫೋನು ರಿಂಗಾಯಿತು. 'ನಾಳೆ ಸಂಜೆ ಅಯ್ದುಕ್ಕೆ ಬಸ್ ಸ್ಟ್ಯಾಂಡಿಗೆ ಬರ್ರಿ, ಲಗೇಜು ಅದಾವು'. ಶ್ರೀ ರಾಮಚಂದ್ರ ಹದಿನಾಲ್ಕು ವರ್ಷ ವನವಾಸ ಮುಗಿಸಿ, ತನ್ನರಮನೆಗೆ ಬಂದಾಗ ಅವನಿಗೂ ಹೀಗೆಯೇ ಸಂತೋಷವಾಗಿರಬಹುದು. 'ಬರ್ತೀನಿ' ಅಂತಾ ಅವಳಿಗೆ ಕನ್‌ಫರ್ಮ್ ಮಾಡಿದೆ. ಮಕ್ಕಳ ಸೈನ್ಯದೊಂದಿಗೆ ನನ್ನ ರಾಣಿಯ ಆಗಮನವಾಯಿತು. ಒಂದು ತಿಂಗಳು ವನವಾಸ ಅನುಭವಿಸಿದ್ದೆ. "ಒಂದು ತಿಂಗಳದಾಗ ಸೊರಗಿ ಹಲ್ಲಿಯಾಗೀರಲ್ಲಾ!. ಊಟಾ ಗೀಟಾ ಮಾಡ್ತಿದ್ರಿಲ್ಲೋ?!. ಬರ್ರೀ ಅವ್ವ ಬುತ್ತೀ ಕಟ್ಟ್ಯಾಳ ಹೊಟ್ಟೀ ತುಂಬಾ ಊಟಾ ಮಾಡ್ರಿ" ಅಂತಾ ಉಣಿಸಿದಳು. 'ಭೋಜ್ಯೇಷು ಮಾತಾ......' ನೆನಪಿಗೆ ಬಂತು. ದಿನವಿಡೀ ಬಸ್ಸಿನಲ್ಲಿ ಪ್ರಯಾಣ ಮಾಡಿ ಮಕ್ಕಳಿಗೆ ದಣಿವಾಗಿರಬಹುದು. ರಾತ್ರಿ ಹತ್ತು ಗಂಟೆಯೊಳಗೆ ಎಲ್ಲರೂ ನಿದ್ದೆ ಹೋದರು. ನನ್ನವಳ ಬರುವಿಗಾಗಿ ಬೆಡ್ ರೂಮಿನಲ್ಲಿ ದಾರಿಕಾಯತೊಡಗಿದೆ. ನಿಧಾನವಾಗಿ ಊಟ ಮಾಡಿ ಬಂದು ನನ್ನ ಚದ್ದರು, ತಲೆದಿಂಬು, ಜಮಖಾನೆಗಳನ್ನು ವೆರಾಂಡದಲ್ಲಿ ತಂದಿಟ್ಟಳು!. ನಿರಾಸೆಯಿಂದ "ಏನೇ ಇದು?!' ಅಂದೆ. "ಏನಿಲ್ಲ ನಿಮಗೆ ಮೂರುದಿನ ರೆಸ್ಟ್. ಊರಿಂದ ಬರುವಾಗ ಬೆಳಿಗ್ಯೆ ನಾನು....." ಅನ್ನುತ್ತಾ ನನ್ನನ್ನು ಹೊರಗೆ ದಬ್ಬಿ ಬಾಗಿಲು ಚಿಲಕ ಹಾಕಿಕೊಂಡಳು. ಗಾಳಿ ತುಂಬಿದ ಬಲೂನಿಗೆ ಸೂಜಿ ಚುಚ್ಚಿದಂತಾಯಿತು. ಓದುಗ ಮಿತ್ರರೇ, ಇಂಥಹ ಯಡವಟ್ಟು ಪ್ರಸಂಗಗಳನ್ನು ನಾನು ಬಹಳಷ್ಟು ಅನುಭವಿಸಿದ್ದೇನೆ. ನೀವು ಅನುಭವಿಸಿದ್ದೀರಾ?!. ●


## MATRIMONIAL

Wanted Kannada Brahmin for Kannada Smartha Girl Age: 20 yrs Doing M.S. in Boston University. Height 5'3" very fair slim good looking. Parents Both Doctors. Settled in Bangalore. Gotra – Haritasa, Shatabisha Nakshatra, Kumbha Raashi.

Contact: Sudha Rao: 9821235511 / 9821267372

Email: sudhashrikant@gmail.com

ಪ್ರಿಯ ಸದಸ್ಯರೇ,

ತಮಗೆಲ್ಲಾ ತಿಳಿದಿರುವಂತೆ, ನಮ್ಮ ಅಸೋಸಿಯೇಷನ್ನಿನ ಶ್ರೀ ಸಿದ್ಧಿ ವಿನಾಯಕನಿಗೆ ನಿತ್ಯ ಪೂಜೆಯು ಅನೇಕ ವರ್ಷಗಳಿಂದ ತಪ್ಪದೇ ನಡೆದುಕೊಂಡು ಬರುತ್ತಿದೆ. ಇದಲ್ಲದೇ, ಆಗಾಗ ಮಾಘಿ, ಅಕ್ಷಯ ತದಿಗೆ ಹಾಗೂ ಗಣೇಶೋತ್ಸವದಂತಹ ವಿಶೇಷ ಪೂಜೆಗಳೂ ನಡೆಯುತ್ತದೆ.

ಈ ಪೂಜೆಗಳನ್ನು ನಿರ್ವಹಿಸುದಕ್ಕಾಗಿ, ನಮ್ಮ ಅಸೋಸಿಯೇಷನ್‌ನ ಸದಸ್ಯರು ಹಾಗೂ ಇತರ ಅಭಿಮಾನಿಗಳು ಉದಾರವಾಗಿ ನೀಡಿದ ದೇಣಿಗೆಯಿಂದ ಪ್ರತ್ಯೇಕ ನಿಧಿಯ ಏರ್ಪಾಟು ಮಾಡಿರುತ್ತದೆ.

ಆದರೆ ಈಗ, ಹೆಚ್ಚುತ್ತಿರುವ ಖರ್ಚುವೆಚ್ಚಗಳಿಂದ, ಈ ನಿಧಿಯಿಂದ ಈ ನಮ್ಮ ಪೂಜೆಯನ್ನು ನಿರ್ವಹಿಸುವುದು ಕಷ್ಟವಾಗಿದೆ. ಆದ್ದರಿಂದ, ಈ ನಿಧಿಯನ್ನು ಬಲಪಡಿಸುವುದು ಅನಿವಾರ್ಯವಾಗಿದೆ.

ಈ ಉದ್ದೇಶದಿಂದ, ನಮ್ಮ ಸದಸ್ಯರುಗಳಿಗೆ ಉದಾರ ದೇಣಿಗೆಗಾಗಿ ಮನವಿ ಮಾಡುತ್ತಿದ್ದೇವೆ. ಪೂಜೆಯ ಅಂದಾಜು ಖರ್ಚುವೆಚ್ಚ ಕೆಳಗೆ ಕೊಟ್ಟಿದೆ. ತಮಗೆ ಇಷ್ಟವಿದ್ದ ದಿವಸ/ದಿವಸಗಳು, ಪೂಜೆಗೋಸ್ಕರ ದೇಣಿಗೆ ನೀಡಬಹುದು. ಆ ದಿನದ ಪೂಜೆಗೆ ತಮಗೆ ಆಹ್ವಾನ ನೀಡಲಾಗುವುದು ಹಾಗೂ ಪ್ರಸಾದವನ್ನೂ ತಮಗೆ ಕಳುಹಿಸಲಾಗುವುದು.

ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಈ ಮನವಿಗೆ ಸ್ಪಂದಿಸಬೇಕು ಎಂದು ಮತ್ತೊಮ್ಮೆ ಕೋರುತ್ತೇವೆ.

ದಯವಿಟ್ಟು ಈ ಕೆಳಕಂಡ ವಿವರಗಳೊಂದಿಗೆ ನಮ್ಮ ಅಸೋಸಿಯೇಷನ್ನಿನ ಕಛೇರಿಯನ್ನು ಸಂಪರ್ಕಿಸಿ.

ಹೆಸರು :
ತಾರೀಖು :
ನಕ್ಷತ್ರ :
ಗೋತ್ರ :
ಮೊತ್ತ :
ನಿತ್ಯ ಪೂಜೆ/ಅಕ್ಷಯ ತೃತೀಯ/ ಗೌರಿ ಗಣಪತಿ ಪೂಜೆ/ ಮಾಘ ಗಣಪತಿ
ಪೂಜೆ :
ಇತರ ವಿವರಗಳು :
ಪೂಜೆಯ ವಿವರಗಳು:

| | ಪ್ರತಿ ಪೂಜೆ (Per Pooja) | ಠೇವಣಿ (Fixed deposit Amount -Life time) |
|---|---|---|
| ಮಾಘಿ ಗಣಪತಿ ಪೂಜೆ | 251.00 | 3500.00 |
| ಅಕ್ಷಯ ತೃತೀಯ ಪೂಜೆ | 251.00 | 3500.00 |
| ಗೌರಿ ಗಣಪತಿ ಪೂಜೆ (ಗಣೇಶ ಚತುರ್ಥಿ) | 251.00 | 3500.00 |
| ನಿತ್ಯ ಪೂಜೆ | 251.00 | 3500.00 |

ವಿ.ಸೂಚನೆ: ಈಗಾಗಲೇ ನಮ್ಮ ಈ ನಿಧಿಗೆ ಕಾಣಿಕೆ ಕೊಟ್ಟಿರುವರು ಕೂಡ ಹೆಚ್ಚಿನ ಕಾಣಿಕೆ ನೀಡುವುದನ್ನು ಸ್ವಾಗತಿಸುತ್ತೇವೆ.

## NAMES OF NITYA POOJA DETAILS FROM 16.09.2016 TO 31.10.2016

| NAMES | DATE OF POOJA | GOTRA | NAKSHATRA |
|---|---|---|---|
| NAGENDRA ACHARYA | SEPTEMBER 18, 2016 | | |
| LATE CHITTARANJAN B.N. | SEPTEMBER 18, 2016 | | ANURADHA |
| B.N.SRIKANTH | SEPTEMBER 18, 2016 | | SHRAVAN |
| UDAYA | SEPTEMBER 18, 2016 | | PUSHYA |
| P.KALAIVAN | SEPTEMBER 19, 2016 | | |
| KRISHNASWAMY | SEPTEMBER 21, 2016 | KASHYAP | ASHWINI |
| PRATIK D. SHETTY | SEPTEMBER 22, 2016 | | HUBHA |
| S.S.PANDIT | SEPTEMBER 24, 2016 | DEVARATAN | HASTA |
| VISHAL M. DEVADIGA | SEPTEMBER 27, 2016 | | |
| ASHOK RAO | OCTOBER 2, 2016 | VASISTHA | UTTARA |
| AJAY J. RAO | OCTOBER 4, 2016 | VISHWAMITRA | UTTARA |
| L.KESHAVAIAH | OCTOBER 10, 2016 | BHARADWAJ | DHANISHTA |
| SANDHYA S. KULKARNI | OCTOBER 11, 2016 | KASHYAP | VISHAKHA |
| S.G.RAVI KUMAR | OCTOBER 13, 2016 | HARITASA | PUNARVASU |
| JAYASHIMHA A.N. (ANANTHASWAMY) | OCTOBER 16, 2016 | VASISTHA | VISHAKA |
| MOHANA MURALI | OCTOBER 17, 2016 | | |
| LATE A.SHRINIVAS RAO | OCTOBER 22, 2016 | KASHYAP | BHARANI |
| RAVI SUBRAMANIAN | OCTOBER 23, 2016 | HARITASA | HASTA |
| SURYANARAYAN S.N. | OCTOBER 24, 2016 | AATREYA | ROHINI |
| MOHAN KUMAR M.S | OCTOBER 25, 2016 | | |
| SATISH BHARGAV | OCTOBER 25, 2016 | | VISHAKHA |
| MEGHANA DORESWAMY | OCTOBER 28, 2016 | HARIDA | BHARANI |
| SRINIVAS RAO K.N. & SUDHA RAO | OCTOBER 30, 2016 | AATRESHA HASTRA | AATRESHA UTTARA |
| P.N.RANGA RAO | OCTOBER 31, 2016 | HARITASA | MRIGASHIRA |
| SUPRIYA NATU | OCTOBER 31, 2016 | VASISTHA | VISHAKHA |

# MUSIC COMPETITION RESULTS - 2016

## KARNATIC MUSIC COMPETITION - 2016

**Winners**

| Sr. No | Group I | Group II | Group III | Prize |
|---|---|---|---|---|
| | Age 8-13 years | Age 14-18 years | Age 18 years & above | |
| 1 | S. Srivathsan | - | Sanjana Raman | I |
| 2 | Mathangi Muralidharan | - | Meera Sridhar | II |
| 3 | Sai Vishwak Dattaa | - | Bhanumathi Sharma | III |
| 4 | Ashwika Kailasanathan | Vinitha Sethuram | -Encouragement | |
| 5 | Rishabh Rajesh | Prajna Adiga | -Encouragement | |

## SUGAMA SANGEET COMPETITION - 2016

### DASARAPADA - Winners

| Sr. No | Group I | Group II | Group III | Prize |
|---|---|---|---|---|
| | **Age 8-13 years** | **Age 14-18 years** | **Age 18 years & above** | |
| 1 | Aniket Iyer | - | Ramya Bharath | I |
| 2 | Mathangi Muralidharan | - | Lakshmi Rajashekhar | II |
| 3 | Ashwika Kailasanathan | - | Krittika | III |
| 4 | Mahati Radhesh | Prajna Adiga | - Encouragement | |
| 5 | S. Sriram | - | - Encouragement | |

## SUGAMA SANGEET COMPETITION - 2016

**BHAVAGEETE - Winners :**

| Sr. No | Group I | Group II | Prize |
|---|---|---|---|
| | Age 8-13 years | Age 14-18 years | |
| 1 | S. Sriram | Swati Venkatesh Naik | I |
| 2 | Mahati Radhesh | Nagashree Mogaveera | II |
| 3 | Pradnya Bhat | - Encouragement | |





Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.







ಭಾನುವಾರ 04 ಸೆಪ್ಟೆಂಬರ್ 2016 ಸ್ವರ್ಣ ಗೌರಿ ಪೂಜೆ ಮತ್ತು ಸೋಮವಾರ 05 ಸೆಪ್ಟೆಂಬರ್ 2016 ರಂದು ಶ್ರೀ ಮಹಾಗಣಪತಿ ಪೂಜೆಗಳನ್ನು ಅಸೋಸಿಯೇಷನ್ನಿನ ಸದಸ್ಯರೆಲ್ಲ ಕೂಡಿ ಹರ್ಷೋಲ್ಲಾಸದಿಂದ ನಡೆಸಿದರು.

**ಮುಂಬರುವ ಕಾರ್ಯಕ್ರಮಗಳು**

ಶನಿವಾರ ಅಕ್ಟೋಬರ್ **8, 2016** ರಂದು ಸಂಜೆ **5.30**ಕ್ಕೆ ಶಾರದಾ ಪೂಜೆ ಮತ್ತು ಪ್ರಸಾದ ವಿನಿಯೋಗ.



ಆಗಸ್ಟ್ 26 ರಂದು ಅಸೋಸಿಯೇಷನ್ನಿನಲ್ಲಿ ಡಾಕ್ಟರ್ ವಿದ್ಯಾಭೂಷಣ ಮತ್ತು ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಇದನ್ನು ಅಸೋಸಿಯೇಷನ್ನಿನ ಸದಸ್ಯರಾದ ಶ್ರೀಮತಿ ಪ್ರಫುಲ್ಲಾ ಉರವಲ್ ಮತ್ತು ಶ್ರೀ ಸದಾಶಿವ ಉರವಲ್ ಕುಟುಂಬದವರು ಆಯೋಜಿಸಿದ್ದರು.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938